ವಿಶ್ವಕಲಾ ಪ್ರಕಟಣೆ ೩

ಶಿವಶರಣ-ಶರಣೆಯರಿಂದ ನಿರೂಪಿಸಲ್ಪಟ್ಟ

# ಕಾಲಜ್ಞಾನ

ಸಂಪಾದಕರು-

ಅ. ಸಿ. ಹಂಜಗಿಮಠ

(ಸರ್ವ ಹಕ್ಕು ಸಂಪಾದಕರಿಂದ ಕಾಯ್ದಿರಸಲ್ಪಟ್ಟಿದೆ)

ಪ್ರಕಾಶಕರು-

ವಿಶ್ವಕಲಾ ಪ್ರಕಾಶನ, ಗದಗ.

ಥಮ ಪ್ರಕಟಣೆ ೧೯೫೯ ಮಾರ್ಚ

ಬೆಲೆ:-೧-೫೦

ಪಾಯಿ ಐವತ್ತು ನ. ಪೈ. ಗಳು ಮಾತ್ರ

824
5252

824
5252

SHRI JAGADGURU GURUSIDDHESHWAR GRANTHALAYA
HUBLI
Gen. Acc. No. ........
Sc.R g No. ........
MOORUSAVIRMATH

# ಕಾಲಜ್ಞಾನ ವಚನಗಳು

## ಶ್ರೀ ನಂದೀ ದೇವರು ಆದಿ ಪ್ರಮಥರು ಧರೆಗೆ ಬರುವ ಸೂಚನೆಯು

ಪ್ರಮಾದೀಚ ಆನಂದದಲ್ಲಿ ಮಧ್ಯದೇಶಕ್ಕೆ ಬಂದು ಹೋದರು । ರಾಕ್ಷಸರ ಸ್ಥಳದಲ್ಲಿ ಹೀನ ಜನರು ಕೆಟ್ಟು ಸ್ವಾನುಭಾವಿಗಳಿಗಾಗಿ ಹುಟ್ಯಾರು । ಸಂದೇಹವಿಲ್ಲವು ॥ ಶಾಲಿವಾಹನಶಕವು ೧೨೭೦ಕ್ಕೆ ಮುಂದೆ ಕ್ಷಯ ಪ್ರಭು ಸಂವತ್ಸರಕ್ಕೆ ಕೋಳು ಹೋಗುತ್ತದೆ । ವಿಜಯಪುರವೂ ಗೋವಲಕೊಂಡ ದುರ್ಗವೂ ಸಹವಾಗಿ । ತಪಸಿಗಳಿಗೆ ಸುಖಂ ಪಾಪಿಗಳಿಗೆ ದುಃಖಂ ಜವ ಪ್ರಾಣಿಗಳಿಗೆ ದೂರ ದುಶ್ಚರ । ಭೂಪತಿಗಳಿಗೆ ಪ್ರತಾಪ ಹೆಚ್ಚಿ ವಿಘ್ನೇಶ್ವರರು ಒದಗಿನಿಂದಾರು.

ದಾರಿಗಳಕಟ್ಟೆ ಚೋರರು ಸುರಿದಾರು । ಪ್ರಾಣಿಗಳಿಗೆಲ್ಲ ದೂರಾದ ಮತವು ಸಾರಿ ಬಂದದ ಕೇಳು । ಶ್ರೀ ಕೃಷ್ಣದೇಶಸ್ಥರು ಮೊಗಲರ ದಂಡು ಬುಗಿಲೆದ್ದು ಬರುವಾಗ್ಗೆ । ತಗೆಬಗೆಯಲಿ ದಕ್ಷಿಣಕೆ ಬರುವಾಗೆ । ಜಗದೀಶ ನಾಣೆ ಸೋತೊಬ್ಬರೂ ಉಳಿಯರು । ನಗಿಗೇಡು ಕರ್ನಾಟಕದೊಳಗೆಲ್ಲ ದೊಡ್ಡ ದೊಡ್ಡ ಅರಸರೂ ತಲಿಕೆಳಗಾಗಿ ಬುಡಮೇಲಾಗಿ ಬಿದ್ದಾರು.

ಗುಡ್ಡದ ಸಣ್ಣ ಅರಸುಗಳೆಲ್ಲ ಬಡಗಲದೇಶಕ್ಕೆ ಹೋದಾರು । ಶ್ರೀ ಪತಿ ಕಾವೇರಿ ತೀರದಲ್ಲಿ ಃಒಬ್ಬ ಕಾಪಾಲಿ ಹರಿಪೂಜಕನು ದೇವಬ್ರಾಹ್ಮಣನು ಶ್ರೀ ವಿಷ್ಣುವಿನ ಭಜಿಸುವನು । ಆ ರಾಜಕಂಠೀರವಾಸ ಸಮಸ್ತ ಮಾನ್ಯರೂ ಕೂಡಿ ಭಾರಿ ದಂಡು ಕಡಿದಾರು । ಕೋಟೆ ದಂಡುಕೂಡಿ ಆರೇರ ದಂಡು ದೇಶತ್ಯಾಗಮಾಡಿಸ್ಯಾರು । ವೀರಗುಮ್ಮಟಹೊರ್ತು ಮಿಕ್ಕಾದ ಗೋರಿಗುಮ್ಮಟ ಹೊಡಿದಾರು.

ನಾರಾಯಣನೆಂಬೊ ಭೋರೆಂಬ ವಾದ್ಯವೆರವಾವು । ಚಂದ್ರಾಧಿಪತಿ ಕಾಶ್ಯಪರಗೋತ್ರದ ಅರಸು ಏಕಛತ್ರದಲ್ಲಿ ರಾಜ್ಯವಾಳ್ಯಾನು । ರಾಮಚಂದ್ರ ನಂತೆ ಪೃಥ್ವಿಪಾಲಿಸ್ಯಾನು । ದ್ವಾರಾಮಧ್ಯ ಭೂಸುರರ ದಾರಿದ್ರ್ಯಬಿಡಿಸ್ಯಾನು । ದಾನ-ಧರ್ಮ ಮಾಡಿ ಕುದುರೆ ಅಂದಳ ಛತ್ರಚಾಮರ । ಹರಭಕ್ತರ ಮನೆಯಲ್ಲಿ ಸಂದಳಿಸುವ ದಿನಬಂತು । ಯಜ್ಞಕರ್ಮಂಗಳು ಬುಗುಲೆದ್ದು ಸ್ವರ್ಗಕ್ಕೆ ನಡದಾವು.

ವಿದ್ಯನಗರಕ್ಕೆ ವೀರಬಸವಂತರಾಯರು ದೀರ್ಘ ಆಯುಷ್ಯದಿಂದ ಆಳ್ಯಾರು । ಇದು ಮೀಸಲದಮಾತು ಪುಸಿಅನ್ನಬೇಡಿ ಕೇಳಿರಯ್ಯಾ । ದೇಶ ದೇಶಗಳು ಕೆಡುತಾವೆಲೇಸಾಗಿಹೋಗಿರಿ ದಕ್ಷಿಣಕ್ಕೆ । ಕಾಶಿವಿಶ್ವನಾಥನ ಮಾತು ವೀಸತೂಕ ಕಡಿಮೆಯಾದರೆ ತಾಳದು । ಅಂತರಭೃಮೆಯಿಂದೆ ಕೆಡುತದೆ । ಈ ಮಾತು ನೂತನವೆಂದು ಕೆಡಬೇಡಿ.

ರಾಮ ಎಂಬೋ ಬಾಯಲ್ಲಿ ಕಾಮಸಂದೆನಬೇಡಿರಿ । ಪೂರ್ವ ಸಂಚಿತ ತಪ್ಪದು ಗಾಳಿ ಮಾತಲ್ಲ । ಘನದ ಮಾತು ! ಮಾಯದ ಮಾತಲ್ಲ ಮರ್ತ್ಯ ದಾಟ । ಕಾಯಬಲ್ಲಾತನಿಗೆ ಕರುಣವಾದೀತು । ಕಾಣಿಸೂದು ಅನ್ನಬೇಡಿ ಮನದಲ್ಲಿ ಮನವಿಟ್ಟು ನೋಡಿರಿ ತಿಳಿದು । ತಿಳಯದಿದ್ದರೆ ದೊರಕಿತು ಅನ್ನಬೇಡಿ। ಮಾಯಾಚಿತ್ರುದ ಮಹಿಮೆ ಮೂರು ತಪಗಳಿಂದೆ ಅರಿತರೆ ಅದು ತಪ್ಪದು । ದಕ್ಷಿಣಕ್ಕೆ ಕಾಶೀತೀರ್ಥವೇ ಸಾಕ್ಷಿ ।

ಮಹಾತ್ಮರಿಂದೆ ಮಹಲೀ ಚಿತ್ರಮೇನಿಲ್ಲಾಗಿ ಮೆರೆವುದು । ಇದು ನಂಬಿದವರು ಕೆಡಬಾರದು । ಒಡಲಪಿಂಡದಮಾತು । ಬಡವನಬಾಯಿ ಮಾತು ಅಂದರೆ ಬಂಧಾನ ತಪ್ಪದು । ಬಡವನಮಾತೆಂದು ಬಿಟ್ಟಾಡಿದರೆ ಭೀತಿತೋರಿತು ಮತಕ್ಕೆ ಒಡೆಯನಲ್ಲ ಎನಬೇಡಿ । ತಿಮ್ಮ ಹೇಳಿದಮಾತು ರಾಮಸ್ವಾಮಿ ಕೇಳಿದ ಮಾತು । ಅಕ್ಷಣವೆ ಆಡಿದಮಾತು ಸ್ವಾದೀ ಹಾದೇಗೆ । ಭಾಷಿಗೆ ಅಭಾಷಿಗೆ ತಪ್ಪಬೇಡಿ ।

ಶ್ರೀ ಗುರುವಿನಾ ಭಾಷಿಗೆ ತಪ್ಪಬ್ಯಾಡಿ । ತಪ್ಪಿದರೆ ತಿಪ್ಪೆಪಾಲು ಆದೀರಿ । ಗುರುವಿನ ಗೂಢಾರ್ಥವ ಒಡದೇನೆಂದವರಿಗೆ ಗುಡ್ಡದಕಲ್ಲು । ಗುರುವಿನ ಗೂಢಾ

ರ್ಥವ ಒಡಿಯನಿಂದಲೇ ಒಡವುದಲ್ಲದೆ । ಮಿಕ್ಕಾದ ಜನರಿಗೆ ಒಡಿಯದು ಇದಕ್ಕೆ ಆಡೋಮಾತಲ್ಲ । ಹಿಂದೆನೋಡಿ ನಡೆವರಾ ಮಾತಲ್ಲ । ಮುಂತೆ ಭರದಿಂದ ಬಂದಾತನ ಕೂಡೆ ಒಂದಾಗಿರಬೇಕು । ಇದ್ದರೆ ನಿಜವುಂಟು । ಇಕ ದಿದ್ದರೆ ಇಲಿ ಬೆಕ್ಕಿನಬಾಯೊಳಗೆ ಬಿದ್ದಂತೆ ಹಿಂದುಳಿಯಲಾಗದು.

ನಾಗರ ಅಮಾವಾಸಿ ಹೋದಮೇಲೆ ನಾಲ್ಕು ದಿವಸಕ್ಕೆ ಮಾಡುವದು ಹಾಜೀರು । ಬಿನ್ನಹ ನಿಜವ ಬರಕೊಳ್ಳಿ । ಬರಕೊಟ್ಟ ಮಾತಿಗೆ ಭೀತಿ ಇಲ್ಲ । ನೀತಿಯೊಳಗಿರಬೇಕು । ಘಾತಕತನವ ಮಾಡಬಾರದು ।। ಮಾತಿನಮನಿಯ ಮುರಿಯಬೇಕು । ಮಥನವ ಬಿಡಬೇಕು ಮಹಾತ್ಮರ ಕೂಡಬೇಕು । ಕೂಡಿ ಇದ್ದರೆ ನಿಜವುಂಟು ಕರ್ಮ ಮಾನ್ನವರಿಗೆ ನೂರು-ಐವತ್ತು ವರಹಾ ಕೊಟ್ಟದ್ದೆ ಗುರುತಾ ಲಗ್ನಕ್ಕೆ ಇನ್ನೂರು ವರಹ ಕೊಟ್ಟದ್ದೆ ಕುರುಹು.

ಜಂಬುರಾಯನಾ ರಾಣ್ಯ ಮದ್ದುರಾಯನ ಪ್ರಧಾನನು । ಉಭಯ ಮಾರ್ಗವೂ ಉತ್ತಮವಾಗಿ ನಡಿಸಿಕೊಂಡವನಾದರೆ । ಮುನ್ನೂರು ಕುದುರೆ ಮೂರೈದು ಒಂಟೆ ಆ ವಂದನಾನೇ ಅಲ್ಲಿಗೆ ಬರಮಾಡುತ್ತೇನೆ।। ಆನೆ ಬರುವ ತನಕ ಯಾವಲ್ಲಿಗೆ ಹೋಗಬೇಡಿರಿ । ಭಕ್ತರಾದವರು ಪಟ್ಟವು ಖರಿಯಾ । ಪಾತಕರಿಗೆ ತಿಳಿಯದು । ಪಟ್ಟಕ್ಕೆ ಪ್ರಭುರಾಯ ಬರುತಾನೆ.

ಸಾಗು ಸಚನೆಯುಮಾಡಿ ಪಾಗಕ್ಕೆ ಕುದರೆಯುಕಟ್ಟಿ । ಭಾಗ್ಯವುಳ್ಳಂಥ ಬಸವಣ್ಣ ಬರುತಾನೆ । ಬಾಗಿಬಂದವರಿಗೆ ಬಯವಿಲ್ಲ । ಬಿಗಿದರೆ ಹಲ್ಲು ಮುರಿದಾನು ಪ್ರಭುರಾಯ । ಬೀಗತನವಾ ಅವಸರಪೋ । ರ ತಿಳಿದು।। ಹರ ನಿಕ್ಕಿದ ಮುಂಡಿಗೆ ಹರಿಯದೊಬ್ಬರಕೂಡ । ಪರಶಿವ ಪರಬ್ರಹ್ಮನಿಕ್ಕಿದಾ ಮುಂಡಿಗೆನರ ಮಾನವರಿಗೆ ಅಳವಲ್ಲಾ । ದಂಡಿಗೆ ಪದಸ್ತರೂ ಮುಂಡಲೀಕ ರನ್ನೆಲ್ಲ ಬಂದು ಮಾಡುವದಿನ ಬಂತು । ಅಂದಿಗೆ ಬಂದದ್ದನರಿಯರು ತಮ್ಮ ದಿಂಡೆಶನದಿಂದ ಮರತಾರು.

ಊರುಮನೆಗಳೊಳು ಪೂರ್ವರೀಕರನೆಲ್ಲ ಪಾರು ಮಾಡುವ ದಿನ ಬಂತು । ಪರಬ್ರಹ್ಮ ತೋರಬಂದ । ಅವಸರ ಪೋರಗಳಿಗೆ ತಿಳಿಯದು ।

ಶಿವನವರು ಬಂದರೆ ಇವರದಲ್ಲಿ ಕಾಣರು । ಬಹುನುಡಿಗಳಾ ನುಡಿದ ಕಾರಣದಿಂದೆ ಅನ್ಯಾಯತಂದ ಪ್ರಭುರಾಯ । ಆತನಾಟ ಒಬ್ಬರಿಗೂ ತಿಳಿಯದು । ಜಬಿನಾಣ್ಯವ ಬಿಟ್ಟುಗೋಣಿ ಹಾಳಿಯನಿಟ್ಟಾರು । ನಿಮ್ಮ ಪ್ರಾಣಕ್ಕೆ ಬಂತು ಕಾಲದೇವತೆಯ ಕೋಣಗಳಿರಾ ನಿಮಗೆ ತಿಳಿಯದು.

ಹೊನ್ನು ಇದ್ದವರ ಹೊಂದ್ಯಾರು । ಕುಟ್ಯಾರು ದುಂಭಿಯ ಕಟ್ಟಿ । ಬಸ ಸುಟ್ಟಾರು ಆವಂದನೆ ಹೊನ್ನು । ಮುಂದಾಗಿ ನೀಗುವದು ಲೇಸು ಬಸವಣ್ಣಾ । ಅಂಬಲಿಯನುಣಬೇಕು ಕಂಬಳಿಯಾ ಹೊದಿಬೇಕು । ಡಂಬಕತನಗಳೆಲ್ಲಾ ಡೊಂಬತಿ ಸೋೀಗು ಕಲಿತರೆ ಕಂಬಕ್ಕೆ ಕಟ್ಟಿ ಬಡಿದಾರು । ಬಂಡಾದೀರಿ ನೀವು ಕುಂಭಿನಿಕರ್ತರು ಬರುತಾರೆ ಕಾಣೋ ಬಸವಣ್ಣಾ.

ಬೇಡರಿಗೆ ಪಟ್ಟರೂಡಿಗೀಶ್ವರಕೊಟ್ಟ । ನಾಡಿಗರಿಗೆ ಬಂತೋ ಪ್ರಳಯ ಕಾಲ । ಕಾಡಬೇಡರು ಹೆಚ್ಚಿಕಾಡ್ಯಾರು ಜಗವೆಲ್ಲ । ಹೂಡಿಕ್ಕೆ ಮುರಿದಾರು । ತೋಡಿದರೆ ಜಲವಿಲ್ಲ ಕೋಡಿ ದಿನಬಂತೋ ಬಸವಣ್ಣ । ಮಠಕ್ಕೆ ಮಾನ್ಯರು ಇಲ್ಲ ಪಟ್ಟಕ್ಕೆ ಅರಸುಗಳಿಲ್ಲ । ಕೊಟ್ಟು ಆಳುವಾ ಧಣಿಕರಿಲ್ಲ । ಲೋಕವನೆಲ್ಲ ಹಿಂಡಿ ಹಿಪ್ಪಿಯಮಾಡ್ಯಾರೋ ಬಸವಣ್ಣ.

ಏಳೀಳು ಲೋಕವನೆಲ್ಲ ದಾಳಿಯಮಾಡಿ ತಂದಾರು । ಧರೆಯೊಳಗೆ ಪರ ಬ್ರಹ್ಮಸ್ವರೂಪ ಜಂಗಮದೇವರ ಕಂಡು ಯೇಳಲವ ಮಾಡ್ಯಾರು । ಆ ಪಾಪ ದಿಂದ ಕೂಳು-ನೀರು ಅಪರೂಪವಾದೀತು । ಸೂರಿದ್ದನ ಭಾವಿಎಂದು ನೀರಿಗೆ ಪಾವಡಹಾಕಿ ಧಾರುಣಿಯೊಳು ಅಣಕವ ಮಾಡ್ಯಾರು । ಆಳಾಗದೇ ನೀರುಜಗವೆಲ್ಲ । ಬಾಳಾಕ್ಷನ ಮನೆಯ ಪಾಲಿಯಕಂದ । ತಳವಾರನಾನಯ್ಯಾ । ಅಲ್ಲಮಗ ಮನೆಯನಿಲ್ಲದೆ ವಾಲಿಯಕಂದ । ಅಲ್ಲಾಆಹುದೆಂಬ ನಿರ್ಣಯವತಂದಾನೆ । ಬಲ್ಲವರು ಬನ್ನಿ ಬಯಲೀಗೆ ಹೀಗೆಂದು ನಿಲ್ಲದಲೆ ವಾಲಿಯಕೊಡುತಿದ್ದ.

ಹೇಳಿದರೆ ಕೇಳಬೇಕು ಮಿಗಿಮೀರಿದವರಿಗೆ ಮೀರಾಸಾಬನ ಆಣೆ । ಆಜ್ಞೆ ಹತ್ತುಕೇಳಬೇಕು ತತ್ವ ತಿಳಿಯಬೇಕು । ದುಶ್ಚಿಂತಿಯಬಿಟ್ಟು ನಿಶ್ಚಿಂತಿಯಾ ಹಿಡಿಯಬೇಕು । ನಿರ್ಮಿತಾ ಗುರುವಲ್ಲ ನಿರಾಕಾರವೇ ಗುರುವು । ವಲ್ಲಭ ಪರಮಗುರು ಪ್ರಧಾನಪಾಚ್ಛ । ಮನಸಿಲಿಮನಲೈಸಿ ಕರ್ಮಹರಾ । ಶಿಡಿಲು

ಮಿಂಚು ಆಕಾಶವೆಡೆಂಕ । ಕೈಲಾಸವೆಪೊಲಿ । ಸೂರ್ಯ-ಚಂದ್ರಾದಿಗಳು ನಿಮ್ಮ ಕಾರ್ಯಕ್ಕೆ ಬಂದವರು.

ರಾಯರು-ದೇವರು ಪಂಚೈವರು । ಊರಗೌಡ-ಸರನಾಡಗೌಡರು ಹರದೇಸಿ-ಪರದೇಸಿ-ನಾಡಗೌಡರು । ಜೋಗಿ-ಜಂಗಮ-ಜೊಸನುಲ್ಲಖಾಜಿ ಕತೀಬ ಸಬ್ಬನೇಸಿ ಸಬೀಚುಲೋಟಕರ್ನಾ । ಖಂಡಗಕ್ಕೆ ಒಂದೇಬೀಜಾ । ಹಿಂದಾದವರಾ ಹುರೂತೀನಿ ಮುಂದಾದವರ ವುಳುವುತೀನಿ । ಅಗಲಕ್ಕೆ ಸುರತ್ಪ ಅಂಥಕಾ ಹಾತಪಕಡನಾ । ಕಂಪೀಸಿ ಚಲಾಣಾ । ಕರ್ಮ ಖಂಡನಾ । ದುರ್ಜನ ನಾಹೋಣಾ । ಹರೀವು ಪಡನಾ । ವುನ್ಮನೀದೇವ ದುರ್ಗಕ್ಕೆ ಪ್ರಭು ಬಾಹುದೆ ಸಂಜ್ಞಾ.

ಇದನ್ನು ಸಾಹೇಬರ, ವಸಭೆಯವರು ತಿಳಿದಿರಬೇಕು । ಹಾವಳೀ ಬರಾ ಹದನರಿತು ಕಾದಾತನೆ ಜಗದಕರ್ತಾ । ಅಲ್ಲಮ ಪ್ರಭುವಿನ ಸೊಲ್ಲೆಲ್ಲ ಒಂದೆ ಅಲ್ಲಾ ಎನಬೇಡಿ । ಸಲ್ಲದೀಮಾತು । ಮೀರಿದರೆ ಮುಂದಿನವರು ಲೆಕ್ಕಕ್ಕೆ ಹಲಾಲು । ಅಕ್ಕ ನಾಗಲಿಮಗ ಚಿಕ್ಕ ಚನ್ನಬಸವಣ್ಣ ಅಕ್ಕಸಾಲೇರಲ್ಲಿ ಜನಿಸಿ ರಕ್ಷಿಸುವಾ ಕರ್ತನಾಗಿ ಬರತಾನೆ । ಕರ್ತನ ಒಕ್ಕಲಾದವರು ಉಳಿದಾರು । ಸೊಕ್ಕಿದವರು ಅಳಿದಾರು ಇದಕ್ಕೆ ಕಕ್ಕಯ್ಯನಾಣೆ ಸಟೆಅಲ್ಲ.

ಅಳನ ಅಳತೆಯಕೊಂಡು ಅಳಿಯನಾಗಿಬಂದಾ । ಈ ಮರ್ತದ ಕಟ್ಟಳೆ ಯಳಿಹುಂಟೆಯಕಟ್ಟೆ ಎಳಸಲುಬಂದ ಚನ್ನಬಸವಣ್ಣ । ಬಂದದ್ದು ತಿಳುವಿಲ್ಲಾ। ನಿಜ ಸತ್ಯಕ್ಕೆ ಶರಣರು ಅರಿದಾರು । ಜಾತಿ ಜಾಶಿಗಳಲ್ಲಿ ಜಾತಿಗಾರಬಂದಾ । ಜಾತ ಅಜಾತನೊಡಗೂಡಿ ಸಕಲ ಸೂತ್ರವ ಸಾರಿಬಂದ ಚನ್ನಬಸವಣ್ಣ । ಸಾರಿಬಂದ ಶುಭ ಸೂಚನೆಯ ಕೇಳಿರೋ ಸುಗುಣರ್‍ಯಾ । ನಿಮ್ಮ ಮಾತಲ್ಲಾ । ಅರಾಟ ಪೋರಾಟ ಆಶೆಮಾಡುತಲಿ ವೇಷಡಂಬಕನಲ್ಲಾ.

ಬಾಸಿಂಗದವರ ಎದೆಶೂಲ ಬಸವಣ್ಣ । ತ್ರಾಸು ತಕ್ಕಡಿಪಿಡಿದುಕೊಂಡು ಲೋಕದಾವಿಸ್ತಾರವ ತೂಗಲಿಕೆಬಂದು । ನಿಂತಾತನಾ ಕೂಡ ಏಸೊಂದು ಮಾತು ನಿಮಗೇಕೆ ॥ ಚೊಕ್ಕಹೀನಾ ಎಂಬುದು ಅಕ್ಕಸಾಲೇನೆಬಲ್ಲಾ । ಲಕ್ಷಕ್ಕೆ

ಒಬ್ಬ ಶರಣನು ಮಹಾತ್ಮೆ ಬಲ್ಲನಲ್ಲದೆ ಮಿಕ್ಕಿದವರಿಗೆ ತಿಳಿಯದು । ಸೋರುಪ್ಪು ಹಟಕವಹಾಕಿ ಮೇಲೆ ಜಾಜಿಯ ತೊಡೆದರೆ ತೋರಬಣ್ಣಕ್ಕೆ ಒಪ್ಪರು.

ಬಾವನ್ನ ಬಣ್ಣವಾಗಬೇಕು । ಬೆಲೆಬರಬೇಕು ಮರ್ತ್ಯಕ್ಕೆ ಮೋಹನ್ನ ನಾಗಬೇಕು । ವುಕ್ಕಳಾಗುವಿಗೆ ಒಪ್ಪರು ನಮ್ಮವರು । ಮಿಕ್ಕಾದನೆಲ್ಲ ಅಳಿಯ ಬೇಕು । ಮರ್ತ್ಯಕ್ಕೆ ಮೋಹನ್ನನಾಗಬೇಕು । ಟಕ್ಕುಟವಳಿಯಬೇಕು ನೀವು । ಅಕ್ಕಸಾಲೇನಕೂಡ ನಡೆಯದು । ಕಕ್ಕಾವಿಕ್ಕಿನದಿನ ಬಂತು ಬಸವಣ್ಣಾ.

**ಪ್ರಭುದೇವರ ವಚನ ಸಂಪೂರ್ಣ ಮಂಗಲ ಮಹಾ ಶ್ರೀ ಶ್ರೀ ಶ್ರೀ**

# ದುಮ್ಮಿಸಾಲಿ ಕಾಲಜ್ಞಾನ

ದುಂದುಮೆ ಬಸವಂತನ ಹಬ್ಬವೋ ದುಮ್ಮಿಸಾಲೆ । ಅಯ್ಯದುಂದು
ಮೆ ಚನ್ನಬಸವನ ಆಟವೋ ದುಮ್ಮಿಸಾಲೆ ।। ಕಾಮನ ಮಕ್ಕಳಿಗೊಮ್ಮ
ನಿಮ್ಮ ನಕ್ಕಿಯೋದುಂ ॥ ಅಯ್ಯಾ ಕಾಮನು ಸತ್ತಾನು ಕಲಿಯುಗದೊಳ
ಗೆಲ್ಲ । ದುಂ । ಆ ಮಹಾದುರ್ಗಿಯು ಅಂಡಾಲೆ ಗೊಂಡಾಳು । ದುಂ ।
ಅಯ್ಯಾ ಪ್ರೇಮದಿ ತುಂಗಾಭದ್ರೆಯ ದಾಟ್ಯಾಳು । ದುಂ । ॥ ೧ ॥

ಹಬ್ಬೀತು ಕೊಟ್ಟೂರು ಶೀಮೆಯನೆಲ್ಲವ । ಮುಂದೆ ಹಬ್ಬವ
ಮಾಡ್ಯಾಳೊ ಗುಡಿಕೋಟೆಯಲಿ ।। ತಬ್ಬಿಬ್ಬು ಗೊಂಡೀತು ಉಜ್ಜಯನಿ
ಪಟ್ಟಣ । ಮುಂದೆ ಉಬ್ಬೀಲಿನಡೆದಾಳು ಚಿತ್ತರ ಕಲ್ಲಿಗೆ । ದುಂ । ॥ ೨ ॥

ತೊತ್ತಿನಮಗಸಿನ್ನು ರಾಜ್ಯವನಾಳ್ಯಾನು । ಅಯ್ಯಾ ಎತ್ತಣರಾಜ್ಯವು
ತೊತ್ತಿನ ಮಗನೀಗೆ । ನಿತ್ಯವು ಆಗೋದು ದುರ್ಗಿಯ ವಶದಿಂದೆ । ಊರು
ಮುತ್ತಿಗಿ ಹಾಕೀತು ಸುತ್ತಾಡಿಕೊಂಡಾಳು । ದುಂ । ॥ ೩ ॥

ಕಾಳಿಯು ಚಂಡಿಕಿಯ ಬ್ಯಾತಾಳಿ ದುರ್ಗಿಯು । ಅಯ್ಯ ತೋಳು
ಉದ್ದವಾದ ಮಾತಂಗಿ ದುರ್ಗಿಯು । ಘಾಳಿಭೂಜಿಲಾಯು ವಿಡಂಬಿದುರ್ಗಿ
ಯಾ । ಅಯ್ಯ ವ್ಯಾಳೀವು ಕೂಡಿತು ಆಕಾಶ ದುರ್ಗಿಯು । ದುಂ । ॥ ೪ ॥

ಊರ ಊರನೆಲ್ಲ ಕೇರಿ ಕೇರಿಯನೆಲ್ಲ । ಅಯ್ಯಾ ಹೋರಾಟ
ಮಾಡ್ಯಾಳು ಹೊರಳ್ಯಾಡಿ ಸತ್ತಾರು । ಹಾರೂರನೆಲ್ಲ ಹರದಾಳಿ ಯಿಕ್ಕ್ಯಾಳು ।
ಅಲ್ಲಿ । ಚೋರ ಜೈನರನೆಲ್ಲ ಸೂರೆಮಾಡ್ಯಾಳಿನ್ನು । ದುಂ । ॥ ೫ ॥

ಒಬ್ಬರು ಉಳಿಯದೆ ಶ್ರೀರಂಗ ಪಟ್ಟಣ । ಅವರಾಬೊಬ್ಬಿಗೆ ದಿಕ್ಕಿಲ್ಲ
ನಿಬ್ಬೆರವಾದೀತು । ಕೊಬ್ಬಿದ ರಾಯರ ಸುಬ್ಬಿ ಸೂರೆಯಮಾಡಿ । ಅಯ್ಯ
ಒಬ್ಬರು ಉಳಿಯಾದೆ ಕದಗಳು ಮುಚ್ಯಾರು ॥ ೬ ॥

ಶ್ರೀರಂಗ ಪಟ್ಟಣ ಸಿರಿಗ್ಯಾರು ದಿಕ್ಕಿಲ್ಲ । ಅಯ್ಯ ಆರು ಕೋಟಿ ದ್ರವ್ಯ
ಅಡವಿಪಾಲಾದೀತು । ಮೀರಿ ಮಾಡಿದ ಪಾಪ ತೋರಿತು ಅವನಿಗೆ । ಸತ್ತು
[illegible]ಗಳ ತೋರೀತು ಅವನಿಗೆ ॥ ೭ ॥

REDMI NOTE 8 PRO
ಶ್ರೀಶೈಲ ತುಂಗಳದ
2021/10/6 13:37

ಹಬ್ಬವಾದೀತಲ್ಲಿ ಭೂತಳದೊಳಗೆಲ್ಲ । ಅಲ್ಲಿಂ । ವುಬ್ಬಿ ಹಾರುತ ಮಲಿ
ಯಾಳ ದೇಶಕ್ಕೆ । ತಬ್ಬಿಬ್ಬುಗೊಂಡೀತು ಮಲಿಯಾಳದೇಶವು । ಅಲ್ಲಿ ಒಬ್ಬರ
ಮನಿಗೆ ಒಬ್ಬರು ಹೋಗಾರು । ದುಂ । ॥ ೮ ॥

ಸತ್ತೀತು ಮಲೆಯಾಳ ಹೊತ್ತುಹಾಕುವರಿಲ್ಲ । ಅಲ್ಲಿ ಕತ್ತಲೆಗವಿದೀತು
ಕಾಮನ ಹಬ್ಬಕ್ಕೆ । ತತ್ತರಿಗೊಂಡೀತು ಮಲೆಯಾಳ ರಾಜ್ಯವು । ತಮ್ಮಾ ।
ಚಿತ್ತದ ವಿದ್ಯವು ವ್ಯರ್ಥಾಗಿ ಹೋದೀತು । ದುಂ । ॥ ೯ ॥

ಮದ್ದು ಮಂತ್ರವಬಲ್ಲ ಸಿದ್ಧ ಪಂಡಿತರನೂ । ಅಲ್ಲಿ: ಬಿದ್ದೆದ್ದು ಹೋದಾರು
ಬುಗ್ಗಿಯ ಹೊಯ್ಕೊಂಡು । ಸುದ್ದಿ ಹೇಳುವದಕ್ಕೆ ದಿಕ್ಕಿಲ್ಲದಿದ್ದಾರು । ಅಲ್ಲಿ ।
ಇದ್ದ ಶಿವಭಕ್ತರು ಬದ್ಧವಾಗಿದ್ದಾರು । ದುಂ । ॥ ೧೦ ॥

ಗಕ್ಕನೆ ತೆರಳೀತು ಇಕ್ಕೇರಿ ಸೀಮೆಗೆ । ಒಳ । ಪೊಕ್ಕುನೋಡಲು
ಅವನ ಭಕ್ತಿಯಂ । ಬೆಕ್ಕಸಗಾಗಿಯೆ ಮುಂದಕ್ಕೆ ತೆರಳ್ಯಾರು । ಮುಂದೆ
ಒಕ್ಕಲನೆಬ್ಬಿಸಿ ತಿಗಳಾದೇಶವೂ । ದುಂ । ॥ ೧೧ ॥

ಎಣ್ಣೆಕಾವೇರಿಯ ಅಣ್ಣನ ಊರೊಂದು । ಅಲ್ಲಮನ್ನಣೆ ಮಾಡಿ ಶರ
ಣೆಂದು ಹೇಳುವಳು । ಕನ್ನಡ ದೇಶವು ಶ್ರೀರಂಗ ಪಟ್ಟಣ । ಅಲ್ಲಿ । ಮುನ್ನೂರು
ದೇವತೆ ಮುಸುಗಿಕ್ಕಿ ಅತ್ತಾವು । ದುಂ । ॥ ೧೨ ॥

ಮೂಗಿನ ದೋರಣಾ ಮೈಸೂರ ದೇವತೆ । ಇನ್ನು ಜಾಗವ ಬಿಟ್ಟಾಳು
ಮುನ್ನೂರು ಗಾವುದ ಲೋಗರ ಮನೆಯತ ಜೋಗುಳವಾಡ್ಯಾಳು ।ಮುಂದೆ।
ಬ್ಯಾಗಾರ ಮನಿಯಲ್ಲಿ ಬೇಡಿಕೊಂಡಿದ್ದಾಳು । ದುಂ । ॥ ೧೩ ॥

ಕಂಚಿಯ ಪಟ್ಟಣವ ವಂಚಿಸಿ ನೋಡ್ಯಾಳು । ಹೊಕ್ಕು । ಮುಂಚೆ
ಕಾಮಾಕ್ಷಮ್ಮನ ಅಪ್ಪಣೆ ಕೇಳ್ಯಾಳು । ಪಂಚಲಿಂಗಕ್ಕೆ ಶರಣೆಯ ನಡೆದಾಳು।
ಅಯ್ಯಾ । ಮಿಂಚುಳ್ಳ ಕಂಚಿಯನಗರವ ಹೊಕ್ಕಾಳು । ದುಂ । ॥ ೧೪ ॥

ಚಂಬೆಪಟಣವೆಲ್ಲಾ ಪಂಜುಗಟ್ಟಿಕೊಂಡು । ದುರ್ಗಿ । ಮುಂಜುರ
ಸುಟ್ಟಾಳು ಮನೆಮನೆ ತಪ್ಪದೆ । ಭಂಜನವಾದೀತು ಧನಂಜಯ ಭಯದಿಂದೆ ।
ಮುಂದೆ । ಕುಂಜುಗರ ಮನೆಯು ತಿರುಮಲದೇಶಕ್ಕೆ । ದುಂ । ॥ ೧೫ ॥

ಮಾರ್ಾಟರಾಜ್ಯವನೆಲ್ಲ
• ಗೋಟರಾಜ್ಯವನೆಲ್ಲ ಮಾಟದಿ ಕೊಂದಾಳು । ಮುಂದೆ ।
ಹಟದಲ್ಲಿ ಕೊಂದಾಳು । ನಾಟಕಸೀಮೆಯ ಜೂಟಿಸಿಬಿಟ್ಟಾಳು ।
ಪಾಟಕ ಸೀಮೆಲ್ಲಾ ಪಂಡಾರ ಪಟ್ಟಾಗಿ । ದುಂ । ‖ ೨೪ ‖

ರಘು । ರಾಮನ ಅಯೋ
• ಗೋಮಾನ ದೇಶಕ್ಕೆ ಸೊಗಸುದೋರ್ಯಾಳು । ಇತ್ತ ।
ಧ್ಯಾನೇಮಿಸಿಬಿಟ್ಟಾಳು । ಎಲ್ಲದುರ್ಗಿಯರು ಒಂದಾಗಿ ತಿರಿಗ್ಯಾರು ।
ಎಲ್ಲೂರು ನೆಲ್ಲೂರುವೂರ್ಮುಂದೆ ಇನ್ನು । ದುಂ । ‖ ೨೫ ‖

• ಎಲ್ಲರ ಕೈಯಲ್ಲಿ ಪೂಜೆಗೊಂಡಾರಿನ್ನು । ಅವರು । ಮಲ್ಲಿಗಿಹೂವಿನ
ಸೂಸಕ ಹಾಕ್ಯಾರು । ಆಯ್ಯಾ । ನೆಲ್ಲೂರು ಹೇಲೂರು ಜೋಗುಳ
ಹಾಡ್ಯಾರು । ದುಂ । ‖ ೨೬ ‖

• ಹದಿನೆಂಟು ದುರ್ಗಿಯರು ಹೊಡಗೊಂಡು ದಿಳ್ಳಿಗೆ । ಅಲ್ಲಿ । ಕದನಕ್ಕೆ
ಬಂದಾಳು ಚದುರಂಗಬಲಗೂಡಿ । ಕದಗಳ ಹಾಕ್ಯಾವು ಡಿಳ್ಳಿಯ ಬಾಗಿಲು ।
ಅಲ್ಲಿ । ಬದನಾಮಿ ಆದೀತು ದುರ್ಗಿಯದೆಶೆಯಿಂದ ।ದುಂ। ‖ ೨೭ ‖

• ಮಾತಂಗಿಯ ಬಲವು ಮೂರು ಲಕ್ಷವು । ಅಯ್ಯಾ । ಬ್ಯಾತಾಳ
ಬಲವು ಆರು ಲಕ್ಷವು । ಮಾತಿನಚ್ಯಾಡಿಗೆ ಒಂಭತ್ತು ಲಕ್ಷವು ಇನ್ನು ।
ಜಾತಿಗೆ ದುರ್ಗೀಗೆ ಒಂಭೆತ್ತು ಲಕ್ಷವು । ದುಂ । ‖ ೨೮ ‖

ಮೂಗಿನ ದುರ್ಗಿಗೆ ಹದಿಮೂರು ಲಕ್ಷವು । ಅಯ್ಯಾ । ಕೂಗಿನಾ
ದುರ್ಗಿಗೆ ಬಾಹರ ಲೆಕ್ಕವೂ । ಸಾಗರ ದುರ್ಗಿಗೆ ಆಗಮ ಲೆಕ್ಕವೂ । ಜಾಗರ
ದುರ್ಗಿಗೆ ಜೋಗಿಣಿ ಲಕ್ಷವೂ । ದುಂ । ‖ ೨೯ ‖

• ಮೂಪಕ ದುರ್ಗಿಗೆ ಸಾಸಿರಐವತ್ತು । ಇನ್ನು । ಆಕಾಶದುರ್ಗಿಗೆ
ಸಾಸಿರಮುನ್ನೂರು । ವಾಸರ ದುರ್ಗಿಗೆ ಸಾಸಿರಐನೂರು । ಅಯ್ಯಾ । ಕೇಶಾರ
ದುರ್ಗಿಗೆ ಮೀಸಲಭೂತವು ‖ ದುಂ ‖ ‖ ೩೦ ‖

• ಇಂತಪ್ಪ ದುರ್ಗಿಗಳುಃ ನಿಂತು ಪೌಜನೆಮಾಡಿ । ಬಸಂವತನಹಬ್ಬಕ್ಕೆ
ಓಕುಳಿಯಾಡ್ಯಾರು । ತಿಂಥಿಣಿಮಾಡಿತು ಭೂತದತಂಡವು । ಪಂಥದಿ ಹೋ
ರ್ಯಾಟಡಿಳ್ಳಿಯಖಾನರೂ । ದುಂ । ‖ ೩೧ ‖

ಕ್ಯಾತರ್ಕೆವಗಡೀತುಕಾಯಿ ಎನುತಲಿ । ಅಯ್ಯಾ । ಡೀಕಿಸಿಕೋಣಾರೆ ಬಲಿಗೆ ಎನುತಲೀ । ಏಕೇಕು ಭೂಭೂತ ಹೇಮೂರು ತೂಮೂರು । ಇನ್ನು । ನೂಕಿತು ಕಾನರು ದುರ್ಗಿಯ ಮುಂಗಡೇ ॥ ದುಂ ॥ ॥ ೩೨ ॥

• ಕಳಪಿಳಿಎನುತಲಿ ಕಡಿದಾಡುತಿದರ್ಾರು । ಅಯ್ಯ । ಝುಳಪಿಸಿ ಕಂಡೆಯವ ತಳತಳನೆ ಹೊಳಪೂತ । ದಳವುಕ್ಕಿ ಖಾನರಪೊಳಿಯಕ್ಕೆ ಹೋಗಬಿಟ್ಟ್ಬ । ಆಯ್ಯಾ । ವೊಳಮಾಡಿದಂತೆ ಗಳಕಾನೆ ನುಂಗ್ಯಾರು ॥ ೩೩ ॥

• ಕತ್ತೀಲಿ ಕಡಿದಾರು ಜತ್ತ್ರಲಿ ಹರಿದಾರು । ಅವರ । ಕುತ್ತಿಗೆಹಿಚಿಕ್ಯಾರು ನೆತ್ತ್ರರಹೀರ್‍ಯ್ಯಾರು । ಬತ್ತ್ರಿಗೆಬಾಣವು ಹತ್ತಿಸೆಹತ್ತ್ಯ್ಯಾವು ಅವರಾ । ಅವರಾ । ಬತ್ತ್ರಿಯನೆಲ್ಲಾವತ್ತಿ ಕಾಲಲಿವರಸೀ ॥ ದುಂ ॥ ॥ ೩೪ ॥

• ಗುಂಡುಗಳತಕ್ಕೊಂಡು ಚಂಡುಗಳಆಡ್ಯಾರು । ಆವರಾ । ದಂಡೆಲ್ಲ ಹ ತ ವಾ ಗಿ ಮಂಡಲಕೆಬಿದ್ದೀತು । ಬಂಡೀಗಾಲಿಯ ಚಕ್ರವಮಾಡ್ಯಾರು । ಅವರಾ । ಹಿಂಡುಆವೆಗಳೆಲ್ಲಾ ತುಂಡೆದ್ದುಹೋಡಾವು । ದುಂ । ॥ ೩೫ ॥

• ಕತ್ತ್ರಿಯಮನೆಗಳು ಕಿಡಿಕಿಡಿಹಾರ್‍ಯ್ಯಾವು । ಅವರು । ತತ್ತ್ರರುಗೊಂಡಾರು ತಮಗೆತಮಗೆ ಕಡಿದಾಡಿ । ನೆತ್ತ್ರರಕಾಲುವೆ ಡಿಳ್ಳೀಯಮುಂದೆಲ್ಲಾ । ವಿಧಿ । ಹತ್ತೀತುಬೆನ್ನನು ಸತ್ತ್ತುಹೋದಾರು ॥ ದುಂ ॥ ॥ ೩೬ ॥

• ಶಾಕಿನಿ ಡಾಕಿನಿ ಚಾಮುರಿಚಂಡಿಗೆ । ಆಕಾಶನುಂಗೀತು ಅದ್ಭುತವಾದೀತು । ಶೋಕವಮಾಡ್ಯಾವು ಸೊಗಸೀನಭೂತವು । ಸ್ವೀಕರಿಸಿನುಂಗ್ಯಾವು ರಣಭೂತವೆಲ್ಲವೂ ॥ ದುಂ ॥ ॥ ೩೭ ॥

• ಭಾಗ್ಯವುಕಿತ್ತು ಬಯಲುಮಾಡ್ಯಾರು । ಅಯ್ಯಾ । ಬಾಗಿಲಕದವದಬ್ಯಾರುಹಿಂದಕ್ಕೆ । ಸಾಗರಬಂದಂತೆ ಡಿಳ್ಳಿಯಪಟ್ಟಣಕೆ ಲೋಗರುಕುರುಮಾರು ಭೀಕರಗೊಂಡಾರು ॥ ದುಂ ॥ ೩೮ ॥

• ಎಂದೆಂದಿಗೂ ಇಂಥಬಂಧಾನ ಬರಲಿಲ್ಲ । ಇನ್ನು । ಸಂದಾನನಡದಾರು ವಂದೊಂದುಮಾತೀಗೆ । ಒಂದನೆ ಮಾಡ್ಯಾರುನಿಂದು ತಾವುಬಾಯೆಂದು । ಬಂಧಾನಬಿಡಿರೆಂದು ಕೈಗಳಮುಗಿದಾರು ॥ ದುಂ ॥ ೩೯ ॥

REDMI NOTE 8 PRO
ಶ್ರೀಶೈಲ ತುಂಗಳದ
2021/10/6 13:37

• ತಿರುಮಲ ದೇಶವತಿರುಭೋರಮಾಡ್ಯಾಳು । ಅಲ್ಲಿಂದ । ಪರ್ವತಕೆ ನಡೆಗೊಂಡು ಬಂದಾಳು । ಬಂದಬರಾದಲ್ಲಿ ಇಂದ್ರಕೀಲವಹತ್ತಿ । ಅಲ್ಲಿ । ನಿಂದು ನೋಡ್ಯಾಳು ಎಂಟು ದಿಕ್ಕುಗಳನು । ದುಂ । ॥ ೧೬ ॥

• ಕಂಡಕಂಡಕಡಿಗೆ ಹರಿದಾಡಿಬಿಟ್ಟಾಳು । ಸುತ್ತಾ । ಬಂಡುಮಾಡ್ಯಾಳು ಎಂಟುದಿಕ್ಕುಗಳನು । ಮಿಂಡಿಮಿಂಡ್ಯಾರ ಗಂಡರನೊಯ್ದಾಳು । ಅತ್ತ । ಕೊಂಡಗಿರಿ ಶೀಮೆದಾಳಿಯನಿಕ್ಕಾಳು । ದುಂ । ॥ ೧೭ ॥

• ಗೋಲಕೊಂಡೆಗೆ ಹೋಗಿ ಕೋಲಾಟ ಹೊಯ್ದಾಳು । ಅಲ್ಲಿ । ಸಾಲುಮಾಳಿಗೆಯಲ್ಲಾ ಹಾಳುಮಾಡ್ಯಾಳಿನ್ನು । ಧೂಳಿಪಾದವ ಮಾಡಿ ತೂರ್ಯಾಳು ದೇಶವ । ಅಲ್ಲಿ । ನುಡಿದಾರು ಸತ್ಯದಾನಡೆನುಡಿ ಜನರಿಗೆ । ದುಂ । ॥ ೧೮ ॥

• ಓರುಗಲ್ಲಿಗೆ ಹೋಗಿ ವೀರನ ಮುಂಗಡೆ । ಮಾರಿಎಂಬಾ ದುರ್ಗಿ ಮನೆಮನೆ ಹೊಕ್ಕಾಳು । ಶೋರಿತು ಸೂಚನೆ ಕಾಶಿಯದೇಶಕ್ಕೆ । ಮಾರಿ ಮಸಣಿ ಬ್ಯಾತಾಳ ಮಾತಂಗಿಯು । ದುಂ । ॥ ೧೯ ॥

• ಹಾರ್ಯಾಡಿ ಹರಿದಾಡಿ ತೂರ್ಯಾಡಿಕೊಂಡಾಳು । ಅಯ್ಯಾ । ತೀರಿಸಿ ಬಿಟ್ಟಾಳು ತಿರುಮಲ ದೇಶವ । ಮೋರೆಗಳು ಬಾಡ್ಯಾವು ಕರಕಂಠದೇಶದಿ । ಅಯ್ಯ । ಆರಾಡಿ ಸುತ್ತಾರು ನವರಂಗಪುರದಲ್ಲಿ ॥ ೨೦ ॥

• ತೊಡೆಬಾತು ಸತ್ತಾರು ಗಡರಂಗಪುರದಲ್ಲಿ । ಅತ್ತಗುಡಗುಂಟೆ ಶೀಮೆಯಲಿ ಕಡದಾಡಿ ಸತ್ತಾರು । ಅತ್ತ । ಕುರುಮರಾಳದಲ್ಲಿ ಬರಬಂದು ಸತ್ತಾರು ॥ ೨೧ ॥

ಮಲಕಿಸಿ ಪಟ್ಟಣ ಕಲಕು ಮಾಡ್ಯಾಳಿನ್ನು । ದೊಡ್ಡ । ಹಲುಗೇರಿ ರಾಜ್ಯವು ಮುರುಕಿಕ್ಕಿಸುತ್ತಾರು । ಹುಲಿಗೇರಿ ಪಟ್ಟಣ ನಲಿಗೇರಿಯಾದೀತು । ಅತ್ತ । ಅಲಗುರುರಾಜ್ಯವು ತಲೆಬಾತು ಸತ್ತಾರು । ದುಂ । ॥ ೨೨ ॥

• ಅಗರಂಗರಾಜ್ಯವ ಸೂರೆ ಮಾಡ್ಯಾಳಿನ್ನು । ಅತ್ತ । ಅಗರಂಗ ಪಟ್ಟಣದೊರೀ ಹೋದೀತು । ಯರಿಗೊಂಡು ಸತ್ತಾರು ಯಾಲಕ್ಕಿ ಪುರದಲ್ಲಿ । ಅಯ್ಯ । ಕುರಿರೋಗ ಬಂದೀತು ಮರುವಣಿ ದೇಶಕ್ಕೆ ॥ ೨೩ ॥

REDMI NOTE 8 PRO
ಶ್ರೀಶೈಲ ತುಂಗಳದ
2021/10/6 13:37

• ರೊಕ್ಕವಕೊಡಿರೆಂದು ಲೆಕ್ಕವಕೇಳ್ಯಾರು । ನಿಮ್ಮ । ಲೆಕ್ಕವು ಏನೆಂದು ಪರವತದೇವರು
ವಕ್ಕಳಿಸಲಾಗಿ । ಅರಮನೆಯೊಳಗಿನ್ನು ಕರಸಿನ್ನು ಲೆಕ್ಕವ ।
ಪೊಗದಿಯಲೆಕ್ಕವೂ ॥ ದುಂ ॥ ೪೦ ॥

• ನಾಮ ಅಲ್ಲಮದೇವ ಕರೆಯ ಕಳುಹಿದನೆಂದು । ನೇಮಿಯು ಸುರ
ತಾಣ ಅಧಿಕಾರಿಬೊಕ್ಕಾಸಿ ಕಾಮಬೊಕ್ಕಾಸಿ ಅಗುರಂಗ ಮೊದಲಾದಾ ।
ಅಯ್ಯ । ಮಾನಕಾರನು ಮುಸ್ತಾಪ ಮಿರಿಜಿಯು । ದುಂ । ॥ ೪೧ ॥

• ಒಪ್ಪಿಹೊತ್ತಾರು ಭಂಡಾರದ್ರವ್ಯವ । ತಪ್ಪದೆಹೊಡದಾರು ಕಣಜದ
ಭಾಗ್ಯವ । ಚಪ್ಪಳಿಬಡಿಯುತ್ತ ಅಪರಮಿತಿಧನಾ । ಒಪ್ಪಿಯೇಹೊತ್ತಾರು
ಎಪ್ಪತ್ತುಸಾವಿರಾ ॥ ದುಂ ॥ ೪೨ ॥

ಹೆಡೆಯಾ ಮೊಟ್ಟೆಯು ಹೆಡಿಗೆಯು ತಲೆಹೊರೆ । ಇನ್ನು ಬಿಡದೇ
ತಿಂಗಳು ಜಡಿವುತ್ತ ಹೊತ್ತಾರು । ವಡಿವೆವಸ್ತುವು ತೊಡಿಗೆಭಂಗಾರವು ।
ಜಡಿವಪಲ್ಲಕ್ಕಿಯು ಮುತ್ತಿನಗೊಂಡೆವು ॥ ದುಂ ॥ ೪೩ ॥

ಸುರಿದಾರು ಕನಕದ ಗಿರಿಯಂತೆ ಹೊನ್ನನು । ಅಯ್ಯಾ । ಕರಗದ
ಬೆಳ್ಳಿಯು ರಜತಾದ್ರಿಯುಂದದೀ । ಸರಿಬಾರದಂಲೆಕ್ಕ ದೊರೆಗಳಮನೆಯಲ್ಲಿ ।
ಇನ್ನು ಸರಿಮಾಡಿ ತರಿಸ್ಯಾರು ಸರಿಬಾರದು ಎಂದು ॥ ದುಂ ॥ ೪೪ ॥

• ವಜ್ರವೈಢೂರ್ಯವು ವಿದ್ರುಮಲತೆಯನು । ಅಯ್ಯಾ ಹೆಜ್ಜವಿಲ್ಲದ
ಅಣಿಮುತ್ತು ಮೊದಲಾದಾ । ಪಟ್ಟುಪಟ್ಟಾವಳಿ ಚಿನ್ನದವಸ್ತುವು । ಇಂಥ ।
ಪಟ್ಟೆದಪೀಠವು ಕಿರೀಟಿ ಮೊದಲಾದಾ । ದುಂ । ॥ ೪೫ ॥

ಒಟ್ಟೆಮುತ್ತುಗಳು ಮೂವತ್ತು ಖಂಡುಗಾ । ಅಯ್ಯಾ । ಅಷ್ಟುಭಂ
ಡಾರವು ಬೆಳ್ಳೀಯಬೆತ್ತವು । ಇಷ್ಟುಕೊಟ್ಟರೆ ಸರಿಸಾಲದು । ಇನ್ನೂ ।
ಭ್ರಷ್ಟಾಗಿಹೋದೀತು ಡಿಳ್ಳಿಯಪಟ್ಟಣ । ದುಂ । ॥ ೪೬ ॥

• ತುಟ್ಟೆಬಿದ್ದೀತು ಒಂಭತ್ತು ಕೋಟಿಯು । ಮತ್ತೆ । ಮುಟ್ಟಿತು
ಲೋಕದಪಾಪವು ಅವನೀಗೆ । ವಡ್ಡರ ಗುಡಿಸೀಲಮೂಗಿನ ದೇವತೆ ।
ಅಯ್ಯಾ । ದೊಡ್ಡಪಂಜನೆಕಟ್ಟೆ ಗಡ್ಡಕ್ಕೆಅಂಟಿಸೀ । ದುಂ । ॥ ೪೭ ॥

REDMI NOTE 8 PRO
ಶ್ರೀಶೈಲ ತುಂಗಳದ
2021/10/

• ದೊಡ್ಡದೊಡ್ಡ ವರವನ್ನು ಹಿಡಿತಂದು ಬಾಧಿಸಿ । ಅಯ್ಯಾ । ವಡ್ಡೊಡ್ಡಿ ಎಣಿಸ್ಯಾರು ಬಡ್ಡಿಯುಸಹವಾಗೀ । ಕೊಳ್ಳಿಯತಕ್ಕೊಂಡು ಡಿಳ್ಳಿಯ ಸುಟ್ಟ್ಯಾಳು । ಅಯ್ಯಾ । ದಳ್ಳುರಿಯನಿಕ್ಕಿ ಎಲ್ಲರ ಸುಟ್ಟ್ಯಾಳೂ। ದುಂ ॥ ೪೮ ॥

• ಕೊಳ್ಳಿಹೊಕ್ಕ ಮನೆ ನಿಲ್ಲದು ಕೇಳಿನ್ನು । ಅಯ್ಯಾ । ಹಳ್ಳಿಗಿಂತ ಕಡೆಹಾಳಾಗಿ ಹೋದೀತು । ಕಾಮನು ಸತ್ತಾನುಡಿಳ್ಳಿಯ ವಳಗೆಲ್ಲಾ ಅಯ್ಯಾ । ಕಾಮನ ಮಕ್ಕಳು ಹೊಯಿಕೊಂಬುವರಿಲ್ಲ । ದುಂ । ॥ ೪೯ ॥

ನಿಸ್ಸಂತನವಾದೀತು ಡಿಳ್ಳೀಯುಪಟ್ಟಣ । ಇನ್ನು । ಏಳ್ನೂರಎಪ್ಪತ್ತು ವರ್ಷಕ್ಕೆ । ಅಪ್ಪಣೆಕೊಟ್ಟ್ಯಾನು ಆನೆಯುಗುಂದಿಗೆ 1 ಅಯ್ಯಾ 1 ವಪ್ಪಿಸಿಕೊಂಡಿರಿ ರಾಜನಕೈಯಲ್ಲೀ 1 ದುಂ 1 ॥ ೫೦ ॥

• ಎಂದ ಮಾತನುಕೇಳಿ ಚಂಡಿಕೆಚಾರಿಯು 1 ಅಂದರು ವಿದ್ಯಾನಗರದ ರಾಯಂಗೇ 1 ಒಂದೊಂದು ಬುದ್ಧಿಯನುಹೇಳಿ ಡಿಳ್ಳಿಯಾ 1 ನೀವು 1 ಬಂದರೆ ಭಾಗ್ಯವತರಬೇಕು ಇಲ್ಲಿಗೇ 1 ದುಂ 1 ॥ ೫೧ ॥

• ಅಲ್ಲಮಾಪ್ರಭುವಿನಾ ಅಪ್ಪಣೆಯುಆಗೇ 1 ಅಯ್ಯಾ 1 ನಿಮ್ಮಲ್ಲಿಗೆ ಭಾಗ್ಯವತರಬೇಕು 1 ಅಲ್ಲಮಾಪ್ರಭುವಿನ ವಲಿಮೆಯು ನಮಗಿನ್ನು 1 ಇಲ್ಲಿ 1 ನಿಲ್ಲದೆಹೋಗುವ ಡಿಳ್ಳೀಯ ಶೀಮೆತನಕಾ 1 ದುಂ 1 ॥ ೫೨ ॥

• ರಾಜನದಂಡು ಪ್ರೇಮದಿಎದ್ದೀತು 1 ಆಯ್ಯಾ 1 ಮಾಜದೆ ಬಲಗೂಡಿ ಡಿಳ್ಳೀಗೆ ನಡೆದಾರು । ಸಾಮಜ ರಥ ಗುದುರೆ ಕಾಲಾಳು ಸಹಜವಾಗಿ । ನಡದು ಚಾಮಾಮಿ ಜಡಿವುತ್ತಡಿಗೆ ನಡಿದಾರು 1 ದುಂ 1 ॥ ೫೩ ॥

• ಬಿಟ್ಟಪೈಣಾವು ಬಿಡದೆ ನಡದಾರು 1 ಅಯ್ಯಾ 1 ಕಟ್ಟ್ಯಾಳು ರಾಮರಾಜನು ಸಹವಾಗಿ 1 ಮುಟ್ಟೀತು ಅಲ್ಲಿಗೆ ಆರುತಿಂಗಳಿಗೆ 1 ಇನ್ನು 1 ಕಟ್ಟ್ಯಾರು ಭಾಗ್ಯದ ರಾಸಿಯನೆಲ್ಲವಾ 1 ದುಂ 1 ॥ ೫೪ ॥

• ಅನ್ನಶಾಂತಿಯಮಾಡಿ ಭೂತವ್ಯಾಕಾಳರಿಗೇ । ಹಿಂದಕ್ಕೆ 1 ಹೊನ್ನಹೇರಿಕೊಂಡು ಚನ್ನಾಗಿ ಬಂದಾರು 1 ಮುನ್ನೂರು ಗಾವುದ ತಮುಗ್ಯಾರು ಎದುರೀಸ್ಯಾ 1 ಅಯ್ಯಾ 1 ಆನೆಗುಂದಿಯದಾಟ ವಿದ್ಯಾನಗರಕ್ಕೆ 1 ದುಂ 1 ॥ ೫೫ ॥

REDMI NOTE 8 PRO
ಶ್ರೀಶೈಲ ತುಂಗಳದ
2021/10/6 13

ಮುಂದೆ 1 ತಂಡತಂಡದಲಿ
• ಭಂಡಾರವನೆಲ್ಲಾ ಗುಡಾರ ತುಂಬ್ಯಾರು 1 ಮುಂದೆ 1 ತಂಡತಂಡದಲಿ ಗುಡಿಯನು ಕಟ್ಯಾರು 1 ಕಾವಲನಿಟ್ಟಾರು 1 ಗುಂಡುಗುಂಡವ ನೋಡದು ಗುಡಿಯನು ಕಟ್ಯಾರು 1 ಅಲ್ಲಿ 1 ಪಾಂಡುರಂಗನ ತಂದು ಪ್ರತಿಷ್ಠೆಯ ಮಾಡ್ಯಾರು 1 ದುಂ 1 ॥ ೫೬ ॥

• ಏಳೆಂಟುವರುಷಾವು ಆಳುತಲಿದ್ದಾರು 1 ಅವರಿಗೆ 1 ದಾಳಿಯು ಬಂದೀತು ಕೇಳಿರಿ ಶಿವನಾಣೆ 1 ಮಾಳವ ಮಾಗರ ಹಮ್ಮೀರ ಸೌರಾಷ್ಟ್ರ 1 ಅಯ್ಯಾ 1 ಕೇಳ್ಯಾರು ಕೇರಳ ರಾಜಾರು ಎಲ್ಲಾರು 1 ದುಂ 1 ॥ ೫೭ ॥

• ಕೊಂಕಣ ಮೈಲಾರ ದುಮ್ಮಿಯರಾಯರು 1 ಅತ್ತ 1 ಅಂಕುಲಕೋಟಿಯು ಅಯೋಧ್ಯ ನಗರಾ 1 ಪೊಂಕುಲಮನ್ನಾಳಲಿಂಕುಲಿರಾಯರು 1 ಮೂರೂ । ಶಂಕದ್ರುವ್ಯವು ಟೆಂಕಲಿಗೆ ವೈದಾರು 1 ದುಂ 1 ॥ ೫೮ ॥

ದಿಕ್ಕಿಲ್ಲದಿದ್ದೀತು ಡಿಳ್ಳಿಯ ಪಟ್ಟಣಾ 1 ಅತ್ತ 1 ರಕ್ಕಸರುಮ್ಮೈಯರು ಕುದುರೆಯ ಮೊಕದವರು 1 ತೆಕ್ಕೆಗಾತ್ರವು ತೋಳ್ಗಳು ತೊಡೆಗಳು 1 ಅವರಾ 1 ರಕ್ಕಸ ಬಾಯಿ ಮೊಳನುದ್ದ ಮೂಗು 1 ದುಂ 1 ॥ ೫೯ ॥

ಗೂಗೆಯ ಮೋರೆಯವರು ಕಾಗಿಯ ಸ್ವರದವರೂ 1 ಮುಂದೆ 1 ಆಗಮ ಸುದ್ದಿಯು ಅವರೀಗೆ ಮುಟ್ಟೀತು 1 ಸಾಗರ ಮಧ್ಯದಿ ರತ್ನಾ ಲೆಖ್ಖವೇ 1 ಡಿಳ್ಳಿ 1 ಆಗರವು ಕೆಟ್ಟೀತು ಅವರೆಲ್ಲಾ ಕೇಳ್ಯಾರು 1 ದುಂ 1 ॥ ೬೦ ॥

ಹದಿನೆಂಟು ರಾಜ್ಯವು ಕದನಕ್ಕೆ ಪೋದಾರು 1 ಅತ್ತ 1 ಬುದಬುದ್ಧ ಹುಟ್ಟೀತು ಉತ್ತರ ದೇಶಕ್ಕೆ 1 ಶಡಗರದ ಡಿಳ್ಳಿಯ ಹಾಳು ಮಾಡ್ಯಾರಿನ್ನು 1 ಅಲ್ಲಿ 1 ಮದನನಾ ಬೂದಿಯಾ ಚೆಲ್ಯಾಡಿ ಪೋದಾರು । ದುಂ 1 ॥ ೬೧ ॥

• ಕಳವು ಎದ್ದು ಬದಕು ಡಿಳ್ಳಿಗೆ ತರಬೇಕು 1 ಮುದಿ 1 ಹೊಳುಕೂಗಿದ ಹಾಗೆ ಎಲ್ಲರು ತಮತಮಗೆ 1 ಸುಳ್ಳಲ್ಲ ಈ ಮಾತು ಅಲ್ಲಮ ಹೇಳಿದಾ 1 ಅಯ್ಯಾ 1 ಬಲ್ಲಿದ ಚೆನ್ನಬಸವನ ವಾಕ್ಯವು 1 ದುಂ 1 ॥ ೬೨ ॥

**ದುಮ್ಮಿಸಾಲಿ ಕಾಲಜ್ಞಾನ ಮಂಗಲ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ**

EDMI NOTE 8 PRO
ಶೈಲ ತುಂಗಳದ
2021/10/6 13:38

# ಕಲಿಯುಗ ಆರಂಭವಾಗಿ ಆಳಿದ ಅರಸುಗಳ ವಚನ

ಪ್ರಭವನಾಮ ಸಂವತ್ಸರದಲ್ಲಿ ಕಲಿಯುಗ ಹುಟ್ಟಿತು । ಚಂದ್ರಗುಪ್ತ ರಾಯನಾಳಿದ್ದು ೧೩೬೨ ವರುಷ । ವಿಕ್ರಮಾರ್ಕನು ೨೦೦೦ ವರ್ಷ । ಶಾಲಿವಾಹನು ಪಂಚವಿಂಶತಿ ವರುಷ । ಭೋಜರಾಜನು ೧೦೮೦ ವರ್ಷ । ಅಶ್ವಪತಿ ೩೦೦ ವರ್ಷ । ಚೋಳಾಖ್ಯರಾಯನು ೭೫ ವರುಷ । ಬಿಜ್ಜಳ ಬಸವೇಶ್ವರದೇವರು ಕಲ್ಯಾಣ ಪಟ್ಟಣವನ್ನಾಳಿದ್ದು ೩೬ ವರ್ಷ ।

ರಾಕ್ಷಸನಾಮ ಸಂವತ್ಸರಕ್ಕೆ ಉಳುವಿಮನಿಗೆ ಬಿಜಯಂಗೈಯ್ದು ದಿವಿಗೆ ಪೋದರು । ಕಲಿಯುಗ ೪೯೧ ವರುಷ । ಶಾಲಿವಾಹನ ಶಕ ೨೮೩ ವರುಷ । ಅಲ್ಲಿ ನಿಂದು ಅಳಿಯ ಬಿಜ್ಜಳ ೬೦ ವರ್ಷ । ಪ್ರತಾಪರುದ್ರ ೧೮ ವರುಷ ಆಳಿದ್ದು । ಆಲ್ಲಿ ಕಲ್ಯಾಣ ಹಾಳಾದೀತು ೧೨ ವರ್ಷಕ್ಕೆ । ಐದಾರು ಯೋಜನ ಕೇರಿಗಳೆಲ್ಲಾ ಹಾಳಾದೀತು । ಎರಡು ಕೇರಿ ಪಟ್ಟಣವಾದೀತು ಮಿಕ್ಕನಕೇರಿ ನಾಶವಾದೀತು.

ಕಲ್ಲುಕುಟಗರ ಕೇರಿ ಕಲುಬುರಿಗೆಯಾದೀತು । ಮೇದಾರ ಕೇರಿ ಕಕ್ಕೈಯ್ಯಗಳಕೇರಿಬಿದಿರೆ ಪಟ್ಟಣವಾದೀತು । ಆಗ ಆಳಿದವರು ಡಿಳ್ಳೀ ಸುಲ್ತಾನನ ಮಂದಿ ೨೧ ಜನರು ಆಳಿದ್ದು ೨೫೧ ವರುಷ । ಹಂಪೆಯ ಬಲ್ಲಾಳರಾಯ ೧೪ ವರುಷ । ವಿಜಯರಾಜಯ್ಯ ೨೯ ವರುಷ । ಕಂಪಲರಾಯ ೪೯ ವರ್ಷ । ಕೊಮಾರರಾಯ ೩೦ ವರುಷ । ಕರಸಂವತ್ಸರಕ್ಕೆ ಲಯವಾದನು.

ಕುರುಬರು ೧೩ ಮಂದಿ ಕೆಲಬರು ೧೩ ಮಂದಿ ವಿಜಯನಗರವನು ಆಳಿ ರಾಮರಾಜನ ಕಡೆಯಾಗಿ ಆಳಿದ ಕಾಲದಲ್ಲಿ ಕ್ರೋಧನ ಸಂವತ್ಸರಕ್ಕೆ ಅವನಿಗೆ ಲಯವಾದೀತು । ಅಲ್ಲಿಗೆ ವಿಜಯನಗರ ಹಾಳಾದೀತು । ಅಲ್ಲಿಗೆ ಆದಿಲಶಾಹಿ ೨೫ ವರುಷ । ಸುಲತಾನ ಶಿಖೇಂದ್ರ ೮೪ ವರ್ಷ । ಆಳುವಾಗ ಮುಗಲರ ಬಗೆಯವರು ನವರಂಗ ಶಾಹಿದನ ಮಗ, ಅವರಂಗಜಪಾಚ್ಛನು ಬಂದು ವಿಜಯನಗರಕ್ಕೆ ಮುತ್ತಿಗೆ ಹಾಕಿದ ೧೨ ವರುಷಕ್ಕೆ ವಿಜಯನಗರ ವನ್ನು ತಕ್ಕೊಂಡನು.

REDMI NOTE 8 PRO
ಶ್ರೀಶೈಲ ತುಂಗಳದ
2021/10/6 13

ರಾಕ್ಷಸನಾಮ ಸಂವತ್ಸರದ ಆಶ್ವೀಜ ಶುದ್ಧ ೯ ದಿವಸ ಮೂರು ತಾಸು ಹೊತ್ತಿಗೆ ಸುಲ್ತಾನ ಶಿಖೇಂದ್ರುನ ಪಟ್ಟಕೋಳು ಹೋಯಿತು. ಅಲ್ಲಿಗೆ ಕಲಿಯುಗ ೪೭೮೫ ವರುಷ ಶಾಲಿವಾಹನ ಶಕೆ ೧೫೫೭ ಔರಂಗಜೇಬ ವಿಜಾಪೂರಕ್ಕೆ ಹೋಗಿ ತಕ್ಕೊಂಡು ಎರಡು ವರ್ಷಕ್ಕೆ ( ಪ್ರಮಾದೂತ ಸಂ. ಕ್ಕೆ ) ಅವರಂಗಪಾಚ್ಛಾಕೂಲಿ ಹೋದನು. ಅಲ್ಲಿಗೆ ಮೊಗಲರ ಪಟ್ಟ ೧೧೦೦ ವರುಷ ತುಂಬಿತು.

ಅಲ್ಲಿಂದ ಮೂರೇಳು ವರುಷ ಕರ ಸಂವತ್ಸರ ತಂದೆಯು ಮುಂದೆ ಮಗನು ನಂದಿಯ ಮೂಲಿಗೆ ನಡೆದು ಸಂದುಹೋದಾನು. ಕಾಂತ್ರೈಯ್ಯದಾಗ ವರುಷನಂದನ ಸಂವತ್ಸರಕ್ಕೆ ಕಾರ್ತೀಕ ಶುದ್ಧ ೧೫ ಸೋಮವಾರದಲ್ಲಿ ಎಣ್ಣೆ ಕಾವೇರಿ ಮಧ್ಯದಲ್ಲಿ ಅನ್ನದಾನಪ್ಪನ ಸತಿ ನಂದಪಾರ್ವತೆಮ್ಮನವರ ಗರ್ಭದಲ್ಲಿ ಅಕ್ಕನಾಗಲೆಯು ಮುಕ್ತಾಯಕ್ಕನಾಗಿ ಬಂದಾಳು.

ಹನ್ನೆರಡು ವರ್ಷದಾ ಈ ಕನ್ನಿಕೆಯು ಈ ರೂಪಿನಲ್ಲಿ ಬರಲು ಅಲ್ಲಿಗೆ ಪ್ರಭುದೇವರು ಬಂದು ವೀರಕ್ತ ರೂಪಿನಲ್ಲಿ ಬಂದು ಕರಸಂತ್ಸರ ಅಲ್ಲಿಂದಾ ಮುಂದೆ ೧೫ ವರ್ಷ ಚಿತ್ತಭಾನು ಸಂವತ್ಸರದ ಕಾರ್ತೀಕ ಮಾಸದಲ್ಲಿ ಚಂದ್ರ ಸೂರ್ಯರ ಗ್ರಹಣ ಒಂದೇ ಮಾಸದಲ್ಲಿ ಬರಲು, ಅಳಿಯ ಬಿಜ್ಜಳಗೆ ವೀರ ಬಸವಂತನಾಗಿ ಬಂದಾನೆಂದು ಲೋಕದೊಳು ಹೇಳುವರು. ಇಕ್ಕೇರಿ ಪಟ್ಟಣ ಕೆಟ್ಟ ನಗರ ವೆನಿಸಿಕೊಂಬುದು,

**ಕಲಿಯುಗ ಅರಂಭವಾಗಿ ಅಳಿದ ಅರಸುಗಳ ವಚನ ಶ್ರೀ ಶ್ರೀ ಶ್ರೀ**

REDMI NOTE 8 PRO
ಶ್ರೀಶೈಲ ತುಂಗಳದ
2021/10/6 13:38

# ನಾಗಲಿಂಗಯ್ಯನವರ ವಚನ

ಕದನಕ್ಕೆ ಮೊದಲಾದ ಬಿದರೂರಕೇರಿಯಲಿ ಹೊಯ್ಯಲೆಡಂಗುರವಾ । ಮದಸೊಕ್ಕಿದಾನೆ ಮಾವುತನೆದ್ದು ಕೊಲುತಿದೆ ಹೊಯ್ಯಲೆಡಂಗುರವಾ । ಪಟ್ಟಣದೊಳಗುಳ್ಳ ಶೆಟ್ಟಿಮಾನ್ಯರಿಂಗೆ ನಷ್ಟವು ತೋರ್ಯಾವು । ಹೊಯ್ಯಲೆಡಂಗುರವ ॥ ೧ ॥

ಒಂದುಕೂಟದಮೇಲೆ ನಿಂದಾರು ಕಲಹದಿ । ಹೊ । ಬಂದ ಕಲಹದಿಂದ ಮಂದಿಯ ನೆಣಿಸ್ಯಾರು । ಪಟ್ಟಣರಾಣಿಗೆ ಕೆಟ್ಟ ಕನಸು ಮುಂದೆ । ಪಟ್ಟಣವೆಲ್ಲವು ಸುಟ್ಟು ಸೂರಿಗಳೆಂದು । ಹೊ । ॥ ೨ ॥

ಬಲ್ಲವರೊಳಗಾದ ಸೋಲಿಪಲಕ್ಷಣ । ಹೊ । ನಿಲ್ಲಿಪೆಸದು ಮುಂದೆ ಕಲಹ ತಪ್ಪದು ಸಿದ್ಧ । ನಾರಿಯು ತೇಜಿಯನೇರಿದ ಸಂಬಂಧ । ಮಾರಿದುರ್ಗಿಯರೆಲ್ಲ ಸೂರಿಗೆ ಬರುತಾರೆ । ಹೊ । ॥ ೩ ॥

ವ್ರತ ನೇಮಶೀಲರು ಮತಿಗೇಡಿಯಾದರು । ಹೊ । ಸತಿಯಿಂದ ಕಾಂತನು ಹತವಾಗುತ್ತೈದಾನೆ । ಕೊಬ್ಬಿದ ಮನುಜರಿಂಗೆ ಹಬ್ಬಾವ ದಿನ ಬಂತು । ಅಬ್ಬರದಿಂದಾರು ಲಕ್ಷವತರಿದಾರು । ಹೊ । ॥ ೪ ॥

ಜಂಗಮ ಲಿಂಗ ದೇವಾಂಗ ಮೆಲ್ಲಕೆ ಮುಂದೆ । ಹೊ । ಭಂಗಬಡುವಕುರುಹುಸಂಗಮ ಬರುತಾನೆ । ಪಾರಿಯಿಂದೊಬ್ಬನು ದಾರಿಯನರಸುತ । ದಾರಿಯ ಮರಿದೆಲ್ಲ ಚಾರಿಗಳಿಲ್ಲೆಂದು । ಹೊ । ॥ ೫ ॥

ಹದ್ದು ಕಾಗಿಗಳೆಲ್ಲ ಗೂಡು ಸೇರುತಲಿವೆ । ಹೊ । ಮಧ್ಯಾಹ್ನದೊಳಗೊಂದು ಪಾವಡಗೆ ಯೆದ್ದೀತು । ಕೊಟ್ಟ ಭಾಷಿಗೆ ತಪ್ಪಿ ಪಟ್ಟಾವ ಕಟ್ಟಿತು । ಪಟ್ಟಕ್ಕೆ ವೀರಬಸವಂತ ಬರುತ್ತಾನೆ । ಹೊ । ॥ ೬ ॥

ಮುಂದೆಬರುವ ಸುದ್ದಿ ಎಂದಿಗೆ ಎಂಬೂದು । ಹೊ । ಬಂದು ಸಾರಿದ ಶೃತಿನಿಂದಗಳೆನಬೇಡಾ । ಅಂಗಡಿಯೊಳಗೆಲ್ಲ ಮಂಗಳೋದ್ಯವು ಎಂದು । ಸಂಗಸದ್ಗುರು ನಾಗಲಿಂಗಸಾರಿದನೆಂದು । ಹೊ । ॥ ೭ ॥

REDMI NOTE 8 PRO
ಶ್ರೀಶೈಲ ತುಂಗಳದ



2021/10/6 13:38

## ಕರಸ್ಥಲದ ನಾಗಲಿಂಗಯ್ಯನವರ ವಚನ

ಅರವತ್ತುಮೂರು ಮಂದಿ ಪುರಾತನರು 1 ನೂರಾವಂದು ಮಂದಿ ಶರಣರು 1 ಏಳ್ನೂರ ಎಪ್ಪತ್ತು ಮಂದಿ ಅಮರ ಗಣಂಗಳು 1 ಬಸವಾದಿ ಪ್ರಮಥರು 1 ಅಸಂಖ್ಯಾತ ಮಹಾಗಣಂಗಳು 1 ಲೆಕ್ಕದ ಬಾಚಯ್ಯ ಚನ್ನ ಬಸವೇಶ್ವರದೇವರು 1 ವೀರಬಸವಂತರಾಯರು 1 ಅಲ್ಲಮಾಪ್ರಭು ಸಹಿತವಾಗಿ ಕಾವೇರಿ ತೀರದ ಮಧ್ಯಪುರದೊಳು ಘನತಿಂಥಿಣಿ ಕೂಡಿ ಸಂತತಿ ಮೆರದೀತು 1 ಶಾಲಿವಾಹನ ಶಕೆ ೧೭೭೬ ಕ್ಕೆ ಸಂತತ ಎಚ್ಚರವೀರಬಸವಂತರಾಯ ಬಂದರೆ ತ್ರಿಪಟ್ಟಕೇಳಾ 1 ಬಹಳ ಎಚ್ಚರಾ ॥ ೧ ॥

ಶ್ರೀ ಕರಸ್ಥಲನಾಗಲಿಂಗೈಯ್ಯನವರ ವಚನ ಮಂಗಲಂ

ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಶಿವಶರಣೆ—

## ನೀಲಲೋಚನೆ ಅಮ್ಮನವರು ಹೇಳಿದ ಕಾಲಜ್ಞಾನವು

ಸುವ್ವಿಬಾ ಸಂಗಯ್ಯಾ ಸುವ್ವಿಬಾ ಲಿಂಗಯ್ಯಾ 1 ಸುವ್ವೀಬಾ ಚನ್ನ ಬಸವಯ್ಯ ಸುವ್ವಿ 1 ಸುವ್ವೀ 1 ಸುವ್ವಿಬಾ ಚನ್ನಬಸವಯ್ಯ ಬರುವಾಗ ಉಯ್ಯಾಲೆಬೊಬ್ಬೆ ಮನಿಮನಿಗೇ ಸುವ್ವೀ ॥ ಪಲ್ಲ ॥

ಅಕ್ಕ ನೀಲಮ್ಮನಿನು ಚಿಕ್ಕೆ ವನಿಕೆಯ ಪಿಡಿದು 1 ಅಕ್ಕಿವಮ್ಮನವಾ ತಳಿಸುತಲಿ ಸುವ್ವೀ 1 ಅಕ್ಕಿವಮ್ಮನ ತಳಿಸೂತ ಪಾಡಿದಳು 1 ಮುಕ್ಕಣ್ಣ ಶಿವನು ಬರುತಾನೆ ಸುವ್ವೀ ॥ ೧ ॥

ಕುಟ್ಟುವ ಬನ್ನೀರಿ ಪಟ್ಟಣದ ಸತಿಯರು 1 ಹೊಟ್ಟು ಕರ್ಮಗಳು ಹರಿವಂತೆ ಸುವ್ವೀ 1 ಹೊಟ್ಟು ಕರ್ಮಗಳು ಹರಿವಂತೆ ತಳಿಸೂತ । ಪಟ್ಟಕ್ಕೆ ಶಿವನು ಬರುತಾನೆ ಸುವ್ವೀ ॥ ೨ ॥

ಹಾಡುತ ಪಾಡುತ ನೋಡುತ 1 ಕೂಡುತ ಶಿವನ ಸ್ಮರಣೆಯಲಿ ಸುವ್ವೀ 1 ಕೂಡುತ ಶಿವನಸ್ಮರಣೆಯನು ನೀಲಮ್ಮ 1 ಕೇಡಿನಸೊಲ್ಲ ನುಡಿದಾಳು ಸುವ್ವೀ ॥ ೩ ॥

ನಮ್ಮಯ್ಯ ಬರುವಾಗ ಉಮ್ಮಾಯಾ ಶರಣರಿಗೆ 1 ಕರ್ಮದ ಲೋಕ ಅಳದೀತು ಸುವ್ವೀ 1 ಕರ್ಮದ ಲೋಕ ಅಳದೀತು ಮುಂದಿನ್ನು 1 ಧರ್ಮ ಗುರು ಬಸವ ಬರುವಾಗ ಸುವ್ವೀ ॥ ೪ ॥

ಕಾರಣೀಕದ ದಿನವು ಬೋರನೆ ಬರುವಾಗ 1 ಮೂರು ದೈವಗಳು ಮುಳಿಗ್ಯಾವು ಸುವ್ವೀ 1 ಮೂರು ದೈವಗಳು ಮುಳಿಗ್ಯಾವು ಮುಂದಿನ್ನು 1 ಘೋರಪಾತಕದ ದಿನ ಬಂತು ಸುವ್ವೀ ॥ ೫ ॥

ಏಳೂರಿಗೊಂದೂರು ಏಳು ಸುತ್ತಿನ ಕೋಟೆ 1 ಹಾಳಾಗುತ್ತೈತೆ ಜಗವೆಲ್ಲಾ ಸುವ್ವೀ 1 ಹಾಳಾಗತ್ತೈತೆ ಜಗವೆಲ್ಲಾ ಮಹಾಮ್ಮಾಯಿ 1 ಕಾಳರಕ್ಕಸಿ ಹುಟ್ಟಿ ಬರುತಾಳೆ ಸುವ್ವೀ ॥ ೬ ॥

ದಿನಮನದ ದುರ್ಗಿಯರು ಅನುದಿಂದ ಬರುವಾಗ । ಮನುಜರದುಃಖ ವೀಪರೀತ ಸುವ್ವೀ 1 ಮನುಜರ ದುಃಖ ವೀಪರೀತ ಮಹಾಮ್ಮಾಯಿ 1 ಘನದಂಡು ಕೂಡಿ ಬರುತಾಳೆ ಸುವ್ವೀ ॥ ೭ ॥

ಆಗರಗಳಳಿದಾವು ಗೂಗಿಗಳೆದ್ದಾವು 1 ಕಾಗೆಯಾ ದಂಡು ನೆರದಾವು ಸುವ್ವೀ 1 ಕಾಗೆಯ ದಂಡು ಬರುವಾಗ ಜಗವೆಲ್ಲಾ 1 ಕೂಗಿ ಬೊಬ್ಬೆಗಳು ಮನಿ ಮನಿಗೆ ಸುವ್ವೀ ॥ ೮ ॥

ಅಣ್ಣಾಗಳ ದಿನಗಳು ಹಣ್ಣುತ ಬರುವಾಗ 1 ಕಣ್ಣೀಲಿಕಾಣೆ ವೆನಬ್ಯಾಡಿ ಸುವ್ವೀ 1 ಕಣ್ಣೀಲಿ ಕಾಣೆ ವೆನಬ್ಯಾಡಿ ಮರ್ತ್ಯಕ್ಕೆ 1 ಮಣ್ಣು ಹೊಯಿಕೊಂಬೊದಿನ ಬಂತು ಸುವ್ವೀ ॥ ೯ ॥

ಅಗ್ಗದ ದಿನಗಾಳು ಮುಗ್ಗುತ ಬರುವಾಗ 1 ಹುಗ್ಗಿ ಹೋಳಿಗಿತುಪ್ಪಾ ಕನಸಾದೆ ಸುವ್ವೀ 1 ಹುಗ್ಗಿ ಹೋಳಗಿ ತುಪ್ಪಾ ಕನಸಾದೆ ಮುಂದಿನ್ನು 1 ಬುಗ್ಗಿ ಹೊಯಿಕೊಂಬೊ ದಿನ ಬಂತು ಸುವ್ವೀ ॥ ೧೦ ॥

ಈಶಾನ್ಯ ದಿಕ್ಕಿಲಿ ಬೀಸಿತು ಬಿರುಗಾಳಿ । ದೇಶಮಂಡಲವಾ ಮುಸಕೀತು ಸುವ್ವೀ । ದೇಶಮಂಡಲವಾ ಮುಸಕೀತು ಮುಂದಿನ್ನು । ಮೋಕ್ಷ ಹೋಗುವಾ ದಿನಬಂತು ಸುವ್ವೀ ॥ ೧೧ ॥

ಬಚ್ಚಲಾದಾವು ಹೊಳೆಯು ವುತ್ಸಾಯ ಶರಣರಿಗೆ । ಎಚ್ಚರಿಕೆ ಇರಬೇಕು ವುದಕಕ್ಕೆ ಸುವ್ವೀ । ಎಚ್ಚರಿಕೆ ಇರಬೇಕು ಉದಕಕ್ಕೆ ಮುಂದಿನ್ನು । ಹುಚ್ಚರನುಡಿ ಎಂದು ಎನಬೇಡಿ ಸುವ್ವೀ ॥ ೧೨ ॥

ಕೆಂಡದ ಮಳೆಗಾಳು ಬಂಡೆದ್ದು ಬರುವಾಗ । ಮಂಡಲಗಳೆಲ್ಲಾ ಉರಿದೆದ್ದು ಸುವ್ವೀ । ಮಂಡಲಗಳೆಲ್ಲಾ ವುರಿದೆದ್ದು ಮಹಾವಮ್ಮಾಯಿ । ಗುಂಡೆಯ ಬಗಿವುತ ಬರುತಾಳೆ ಸುವ್ವೀ ॥ ೧೩ ॥

ಆಡು ಆನೆಯ ನುಂಗಿ ಕೋಡಗ ಕುದುರೆಯ ನುಂಗಿ । ಕಾಡಾನೆಗೆರಡು ಗರಿಮಾಡಿ ಸುವ್ವೀ । ಕಾಡಾನೆಗೆರಡುಗರಿ ಮೂಡಿ ಈ ಮಾತು । ಮೂಢಮನುಜರಿಗೆ ತಿಳಿಯಾದು ಸುವ್ವೀ ॥ ೧೪ ॥

ಕತ್ತಲಜೋತಿಯಾ ಎತ್ತಿತಾನುಂಗುವದಃ । ಹೆತ್ತತಾಯಿ ಮಗಳು ಅಮಳಾಕ್ಷಾ ಸುವ್ವೀ । ಹೆತ್ತ ತಾಯಿಮಗಳು ಅಮಳಾಕ್ಷಾ ಮಾಡುವದು । ಅರ್ಥ ಮನುಜರಿಗೆ ತಿಳಿಯದು ಸುವ್ವೀ ॥ ೧೫ ॥

ಹೆಂಡತಿ ಗಂಡನಹಡದು ಮಂಡೆಯಾ ನೋಡುವಳು । ಖಂಡಗರಕ್ತವ ಕುಡಿದಾಳು ಸುವ್ವೀ । ಖಂಡಗರಕ್ತವಾ ಕುಡಿದಾಳು ಇದಕಂಡು ರಂಡೆಯಾ ಮಗನಗುತಿರ್ದ ಸುವ್ವೀ ॥ ೧೬ ॥

ಅತ್ತಿ-ಅಳಿಯನಹಡದು ಕುತ್ತಿಗೆಮುರಿದಾಳು ಹೆತ್ತತಾಯಿಯ ಮಗಳು ಅಮಳಾಕ್ಷಾ ಸುವ್ವೀ ಹೆತ್ತತಾಯಿಯ ಮಗಳು ಅಮಳಾಕ್ಷಾ ಈ ಮಾತು ಅರ್ಥ ಮನುಜರಿಗೆ ತಿಳಿಯಾದು ಸುವ್ವೀ ॥ ೧೭ ॥

ಅಟ್ಟ-ಅಡಿಗೆಯನೆಲ್ಲ ಹುಟ್ಟಿದ್ದು ನುಂಗುವದು । ಪುಟ್ಟನುಂಗುವದು ಶರಧಿಯನು ಸುವ್ವೀ । ಪುಟ್ಟನುಂಗುವದು ಶರಧಿಯನು ಚನ್ನಬಸವ । ಹುಟ್ಟಿತಾ ಯಿನ್ನು ಬರುವಾಗ ಸುವ್ವೀ ॥ ೧೮ ॥

MI NOTE 8 PRO

ಕಾರಮೇಘದ ಮಳೆಯು ಸೂರ್ಯನಾ ನುಂಗುವದು । ಮೂರೇಳು ದಿವ್ಸ ಮುಳುಗುವದು ಸುವ್ವೀ । ಮೂರೇಳುದಿವಸ ಮುಳುಗುವದು ಮರ್ತ್ಯಕ್ಕೆ ವೀರಬಸವಂತ ಬರುತಾನೆ ಸುವ್ವೀ ॥ ೧೯ ॥

ಅರ್ಥ-ಅನುಭಾವಗಳು ವ್ಯರ್ಥಮಾನವರಿಗೆ ಕತ್ತಲೆಗವಿದು ತಿಳಿಯಾದು ಸುವ್ವೀ । ಕತ್ತಲೆಗವಿದು ತಿಳಿಯದು ಅನುಭಾವ । ಮತ್ತೆ ಶರಣರಿಗೆ ತಿಳಿದಾವು ಸುವ್ವೀ ॥ ೨೦ ॥

ಮಲಮೂರು ಮುಸುಕಿದಾ ಹೊಲೆಯ ಮಾನವರಿಗೆ । ನೆಲೆಯದೊರಕುವದೇ ಅವರಿಗೆ ಸುವ್ವೀ । ನೆಲೆಯು ದೊರಕದು ಅವರಿಗೆ ಅನುಭಾವ । ಮಲಹರನಾ ಶರಣರರಿತಾರು ಸುವ್ವೀ ॥ ೨೧ ॥

ಬೆಡಗಿನಾಮಾತುಗಳು ಮಡಿದು ಹೋಗುವರಿಗೇ । ತೊಡರು ಜಂಝಡಿಯು ಅವರೀಗೆ ಸುವ್ವೀ । ತೊಡರು ಜಂಝಡಿಯು ಅವರಿಗೆ ಶರಣರಿಗೆ । ಹಿಡಿದ ಕನ್ನಡಿಯ ಪ್ರಭೆಯಂತೆ ಸುವ್ವೀ ॥ ೨೨ ॥

ಮದಮೂರು ಮಾನ್ವರಿಗೆ ಹೃದಯಾದಿ ತಿಳಿಯದು । ವುದರಿಹೋಗುವಾ ನರರೀಗೆಸುವ್ವೀ । ವುದರಿಹೋಗುವಾ ನರರಿಗೆ ತಿಳಿಯಾದು । ಉದಯಾಸ್ತ ಮಾನದರ್ಪಣವು ಸುವ್ವೀ ॥ ೨೩ ॥

ಶರಣರಕೈಯಿಂದ ಮರಣವಾದವು ಸುವ್ವೀ । ವರುಣಸಿಂಹಾಸನದಿ ಕುಳಿತಾನು ಸುವ್ವೀ । ವರುಣಸಿಂಹಾಸನದಿ ಕುಳಿತಾನು ವಸವಂತ । ಕಿರಣಕೋಟಿಯ ಬೆಳಕಿನಲೀ ಸುವ್ವೀ ॥ ೨೪ ॥

ಶ್ರಾಪಕೊಳಗಾಗದಾ ಭೂಪರಿಬ್ಬರುಪುಟ್ಟಿ । ಶ್ರೀ ಪರಂಜ್ಯೋತಿ ಕಲ್ಯಾಣದ ಸುವ್ವೀ । ಶ್ರೀ ಪರಂಜ್ಯೋತಿ ಕಲ್ಯಾಣದೊಳಗಿನ್ನು ಗೋಪತಿ ಪಟ್ಟ ಅವರೀಗೇ । ಸುವ್ವೀ ॥ ೨೫ ॥

ಮಲ್ಲಿಗಿಹೂವಿನಾ ಮಳೆಗಳುಸುರಿದಾವು । ಮಲ್ಲಿಕಾರ್ಜುನನ ಕರುಣಾದಿ ಸುವ್ವೀ । ಮಲ್ಲಿಕಾರ್ಜುನನ ಕರುಣಾದಿ ಇಬ್ಬರಿಗೆ । ಕಲ್ಯಾಣದೊಳಗೆ ಸ್ಥಿರಪಟ್ಟ ಸುವ್ವೀ ॥ ೨೬ ॥

REDMI NOTE 8 PRO
ಶ್ರೀಶೈಲ ತುಂಗಳದ
2021/10/6 13:38

ಧರಣಿಭುವನ ಗಾಳುಸಾರ ಅಮೃತಅಳ್ಳಿ 1 ಮೂರುಪಟ್ಟಗಳು ಸ್ಥಿರಬಾಳಿ ಆಮೇಲೆ ದಾರಿಯಾಗುವದು
ಬಾಳಿ ಸುವ್ವಿ 1 ಮೂರುಪಟ್ಟಗಳು ಸ್ಥಿರಬಾಳಿ ಕೈಲಾಸಕ್ಕೆ ಸುವ್ವೀ ॥ ೨೭ ॥

ನಾರಿನೀಲಮ್ಮನು ಸಾರಿಪೇಳಿದಳಾಗ । ವೀರಬಸವಂತ ಚನ್ನಬಸವಣ್ಣ
ಸುವ್ವೀ 1 ವೀರಬಸವಂತ ಚನ್ನಬಸವಣ್ಣ ಶರಣರಿಗೆ 1 ಮಾರಹರಮೆಚ್ಚಿ ಮನೆಗೊಯ್ವ ಸುವ್ವೀ ॥ ೨೮ ॥

ಪಟ್ಟತೀರಿದಬಳಿಕ ಸೃಷ್ಟಿಗೊಬ್ಬರ ನಿಲಿಸಿ 1 ಬೆಟ್ಟ ಕೈಲಾಸಪುರಕಿನ್ನು
ಸುವ್ವೀ 1 ಬೆಟ್ಟ ಕೈಲಾಸಪುರಕಿನ್ನು ಶರಣರು 1 ಪುಟ್ಟುವರಿನ್ನು ಉಘೆಎನ್ನಿ ಸುವ್ವೀ ॥ ೨೯ ॥

ಕುಟ್ಟುತ ಒಮ್ಮನದ ಅಕ್ಕಿಯತಳಸುತ 1 ಸೃಷ್ಟಿಪಾಲಕರಿಗೆ ಉಣಿ
ಸುತ ಸುವ್ವೀ 1 ಸೃಷ್ಟಿಪಾಲಕರಿಗೆ ಉಣಿಸುತ ನೀಲಮ್ಮ ಬಟ್ಟಬಯಲೊಳಗೆ ಬಯಲಾದಾಳು ಸುವ್ವೀ ॥ ೩೦ ॥

**ನೀಲಲೋಚನೆ ಅಮ್ಮನವರು ಹೇಳಿದ ಕಾಲಜ್ಞಾನ ವಚನವು ಸಂಪೂರ್ಣ ಶ್ರೀ**

# ಸರ್ವಜ್ಞಮೂರ್ತಿ ಹೇಳಿದ ಕಾಲಜ್ಞಾನ

ಆಗಮಗಳಳಿದಾವು ಗೂಗೆ ಮರಕ್ಕಳಿದಾವು
ಕಾಗೆ ಕಾಳಿದ್ದು ಬಡಿದಾವು ದೊರೆಗಳು
ಮೂಗರಾದರು ಸರ್ವಜ್ಞ ॥ ೧ ॥

ಝಲ್ಲಿಯಾ ಬಲ್ಲವರು ಅಲ್ಲಿಗೆ ಎಲ್ಲರೂ
ಕಲ್ಯಾಣದರಸು ಬಸವಣ್ಣ ಬರುವಾಗ
ಅಲ್ಲಿ ಚಲ್ಲಾಟ ನೋಡೆಂದ ಸರ್ವಜ್ಞ ॥ ೨ ॥

ಸಣ್ಣನೆಯ ಮೂಗಿನಾ ನುಣ್ಣಾದ ತುರುಬಿನಾ
ಅಣ್ಣಗಳೆಲ್ಲ ಮಡಿವರು ಚನ್ನಬಸವಣ್ಣ
ತಾ ಬರುವಾಗ ಸರ್ವಜ್ಞ ॥ ೩ ॥

ಸೂಳೆಯಾ ಮಗ ಹುಟ್ಟಿ ಆಳ್ಯಾನು ಮಣಿಪುರವ
ಕಾಳಗವಿಲ್ಲದೆ ಮಡಿಯುವನು ಆ ಪುರುವು
ಕೋಳು ಹೋದೀತು ಸರ್ವಜ್ಞ ॥ ೪ ॥

ಅಂಗದೇಶದ ಪಾರಂಗೇರು ಬಂದು
ಶ್ರೀರಂಗ ಪಟ್ಟಣ ತಕ್ಕೊಂಡು ಲೋಕವನು
ಭಂಗಪಡಿಸ್ಯಾರು ಸರ್ವಜ್ಞ ॥ ೫ ॥

ಉತ್ತರ ದಿಕ್ಕಿನಲಿ ಹತ್ತೀತು ಬಹುಬೇಗೆ
ಸತ್ತವರ ಕೊಂಡು ಬರುವಾಗ ಜಗಕೆಲ್ಲ
ಕತ್ತಲಾದೀತು ಸರ್ವಜ್ಞ ॥ ೬ ॥

ಚಂದ್ರ ಸೂರ್ಯರ ಗ್ರಹಣ ಒಂದೇ ಮಾಸದಿ ಬಂದು
ತಂದೆಯನು ಕಂದ ನಿರಿದಂದು ಲೋಕಕ್ಕೆ
ಬಂದೀತು ಪ್ರಳಯ ಸರ್ವಜ್ಞ ॥ ೭ ॥

ಇರವೆದ್ದು ಮಡಿವಲ್ಲಿ ಕೆರೆಕಟ್ಟೆಯೊಡದೀತು
ಬರನಟ್ಟಿ ಬಡಿಯೆ ಜಗಮಡಿಯೆ ಶರಣರು
ಬರುವದಕೆ ಕುರುಹು ಸರ್ವಜ್ಞ ॥ ೮ ॥

REDMI NOTE 8 PRO
ಶ್ರೀಶೈಲ ತುಂಗಳದ
2021/10/6 13:3

ಪಾತಾಳ ಗಂಗೆಯನು ಓತುಚಿಪ್ಪಿಲಿ ಮೊಗದು
ಭೂತಳವೆಲ್ಲ ವುರಿದದ್ದು ಮುಂದೊಬ್ಬ ದಾತ
ಹುಟ್ಟುವನು ಸರ್ವಜ್ಞ ॥ ೯ ॥

ಧಾರುಣಿಯು ನಡಗುವದು ಮೇರು
ಅಲ್ಲಾಡುವದು ವಾರಿಧಿಯು ಬತ್ತುವದು
ಶಿವಭಕ್ತಿ ಏರಯ್ಯದಂದು ಸರ್ವಜ್ಞ ॥ ೧೦ ॥

ಒತ್ತಿದಾ ಜಗಳಕ್ಕೆ ಸುತ್ತಮುತ್ತಿಗಿಹಾಕಿ
ತೊತ್ತಲದುಳಿದ ಕೊಲುವಾಗಳುಳುವಿಯ
ಕರ್ತಬಂದಾನು ಸರ್ವಜ್ಞ ॥ ೧೧ ॥

ತಾರಣ ಸಂವತ್ಸರದಿ ಕಾರಣಗಳು ನಡದಾವು
ವಾರಣಾಸಿಯಲಿ ಗುಡಿಗಟ್ಟಿ ಬೇಲೂರೊಳು
ತೋರಣ ಕಟ್ಯಾವು ಸರ್ವಜ್ಞ ॥ ೧೨ ॥

ಪಟ್ಟವಿಲ್ಲದ ಕೂಸು ಸೃಷ್ಟಿಯನು ಆಳೀತು
ಪಟ್ಟಣದ ರಾಣಿ ಮಡಿದ ಮರುದಿವಸ
ಶರಣರಾ ಪಟ್ಟಕಾಣಯ್ಯ ಸರ್ವಜ್ಞ ॥ ೧೩ ॥

ಸೂಳೆಯಾ ಮಗನೊಬ್ಬ ಆಳ್ಯಾನು ರಾಜ್ಯವ
ಮೇಲೊಬ್ಬನಾಳಿ ನಾರಿಮಾತನು ಕೇಳಿ
ಕೋಳು ಹೋದಾನು ಸವಜ್ಞ ॥ ೧೪ ॥

ನಂದಿಯಾ ದುರ್ಗವನು ಅಂದದಲಿ ತೆಗೆದಾರು
ಅಂದದಲಿ ತೆಗೆದ ಆರನೆಯ ವರುಷಕ್ಕೆ
ಬಂದಾನು ಶರಣ ಸರ್ವಜ್ಞ ॥ ೧೫ ॥

ಸುತ್ತು ಕೋಟೆಮೇಲೆ ಮತ್ತೆ ಕೋಟೆ ಹಾಕಿ
ಮುತ್ತೈದ ಮಗನು ಆಳಿದಾನು ಬಿದರೂರ
ಎತ್ತಿ ಹೋದೀತು ಸರ್ವಜ್ಞ ॥ ೧೬ ॥

ಎತ್ತು ಮಾರುವನೊಬ್ಬ ತೊತ್ತಿನಾಮಗನೊಬ್ಬ
ಮುತ್ತು ಮಾರುವನಾದೆಸೆಯಿಂದ ರಾಜ್ಯಕ್ಕೆ ॥ ೧೭ ॥
ಮೃತ್ಯುಕಾಣಯ್ಯ ಸರ್ವಜ್ಞ

ಮಂದಾನ ಪುರದಲ್ಲಿ ಕಾದಿಲಗ್ಗೆಯಮಾಡಿ
ಮಾಧವನ ಪಡೆಯ ಸದೆಬಡೆದು ಕಲ್ಯಾಣದ ॥ ೧೮ ॥
ಹಾದಿಹಿಡಿದಾನು ಸರ್ವಜ್ಞ

ಇಕ್ಕೇರಿ ಸೀಮೆಯಾ ಲೆಖ್ಖವನು ಕೇಳಿರೋ
ಇಕ್ಕೇರಿಯಳಿದ ಹತ್ತು ವರ್ಷಕ್ಕೆ ಜಗದಿ ॥ ೧೯ ॥
ಮುಕ್ಕಣ್ಣನಾ ಬರವು ಸರ್ವಜ್ಞ

ರಂಗಪಟ್ಟಣದೊಳಗೆ ರಂಗಭಕ್ತನು ಹುಟ್ಟಿ
ರಂಗಪೂಜೆಯ ತಪ್ಪಿಸಲು ಆ ಪಟ್ಟಣ ॥ ೨೦ ॥
ಭಂಗವಾದೀತು ಸರ್ವಜ್ಞ

ಬಟ್ಟೆಯಾ ಬಸ್ತಿಯನು ಆಟದಲಿ ಒಡೆದಾರು
ಆಟದಲಿ ಒಡೆದ ಆರನೆಯ ವರುಷಕ್ಕೆ ಶರಣ ॥ ೨೧ ॥
ತಾ ನೀಟಾಗಿ ಬರುವ ಸರ್ವಜ್ಞ

ಎಂದು ಬಂದಾನೆಂದು ಸಂದೇಹಗೊಳಬೇಡ
ತಂದೆಯಾ ಮಗನು ಕೊಂದಂದು ಬೇಸಿಗೆಯ ॥ ೨೨ ॥
ಮುಂದೆ ಬಂದಾನು ಸರ್ವಜ್ಞ

ನಂದಿಯಾ ಹೆಸರಿನ ಅರಸು ರಾಜ್ಯವನಾಳಿ
ಬಂಧಾನ ಬಿಟ್ಟು ಭಯಬಿಟ್ಟು ನೀರಲಿ ॥ ೨೩ ॥
ಸಂದು ಹೋದಾನು ಸರ್ವಜ್ಞ

ವೀರಶರಭನಾ ಹೊಡೆದ ಈರೈದು ವರುಷಕ್ಕೆ
ಧೀರ ನರಸಿಂಹ ನೆಲಿಸಾನು ಶರಭನು ॥ ೨೪ ॥
ಸಾರಿ ಬರುತಾನೆ ಸರ್ವಜ್ಞ

REDMI NOTE 8 PRO
ಶ್ರೀಶೈಲ ತುಂಗಳದ 2021/10/6 13:3

ಕೊಟಿ ಕೋಟಿಗಳಿದ್ದು ಬ್ಯಾಟಿಗಳನೆಡಿಗೊಂಡು
ಪ್ಯಾಟಿ ಕೋಟಿಗಳ ಸವರುತಾ ಮುಂದೊಬ್ಬ
ಧಿಟ್ಟ ಬಂದಾನು ಸರ್ವಜ್ಞ ॥ ೨೫ ॥

**ವಿ. ಸೂ.** ಈ ಪುಸ್ತಕದಲ್ಲಿ ಕೆಲವೇ ಸರ್ವಜ್ಞನ ಕಾಲಜ್ಞಾನ ವಚನಗಳನ್ನು ಪ್ರಕಟಿಸಿದ್ದು, ಇನ್ನು ಸುಮಾರು ೪೦೦ ಕ್ಕೂ ಮೇಲ್ಪಟ್ಟು ಇರುವ ಸರ್ವಜ್ಞನ ಕಾಲಜ್ಞಾನ ವಚನಗಳನ್ನು ಮುಂದಿನ ಭಾಗದಲ್ಲಿ ಪ್ರಕಟಸಲಾಗುವದು. **ಸಂಪಾದಕ.**

---

**ಶಿವಶರಣೆ—**

## ಸತ್ಯವ್ವ ಹೇಳಿದ ಕಾಲಕಾಜ್ಞಾನ

ಕುಟ್ಟುವ ಬನ್ನೀರಿ ಪಟ್ಟಣಪತಿಯಾರು ಹೊಟ್ಟು ಕರ್ಮಗಳು ಹರಿವಂತೆ ಸುವ್ವೀ ಹೊಟ್ಟು ಕರ್ಮಗಳು ಹರಿವಂತೆ ಮರ್ತ್ಯಕ್ಕೆ ಕೆಟ್ಟ ದಿನಗಳು ಬರುತಾವೆ ಸುವ್ವೀ ॥ ೧ ॥

ಬುತ್ತೀಗೆ ಉಪ್ಪಿಲ್ಲ ಎತ್ತಿಗೆ ಮುಟ್ಟಿಲ್ಲಾ ಮತ್ತೆ ಮರ್ತ್ಯಕ್ಕೆ ವುಳುವಿಲ್ಲ ಸುವ್ವೀ ಮತ್ತೆ ಮರ್ತ್ಯಕ್ಕೆ ವುಳುವಿಲ್ಲ ಚನಬಸವಾ ಹುಟ್ಟಿ ಬರ್ತಾನೆ ಜಗವರಿಯೆ ಸುವ್ವೀ ॥ ೨ ॥

ಅಕ್ಕಿ ಓಗರಕಾಗಿ ಹೊಕ್ಕಾರು ಮನೆ ಮನೆಯಾ ರಟ್ಟೆಹಿಡಿದು ವಗೆದಾರು ಸುವ್ವೀ ರಟ್ಟೆಯಾ ಹಿಡಿದು ವಗೆದಾರು ಮರ್ತ್ಯಕ್ಕೆ ಕೊಟ್ಟೂರ ಬಸವ ಬರುತಾನೆ ಸುವ್ವೀ ॥ ೩ ॥

ಅನ್ನಗಳು ಅಡಿಗ್ಯಾವು ಹೊನ್ನುಗಳು ಮಾಜ್ಯಾವು ಮಾನ್ಯ ಮಾನ್ಯರು ಅಳಿದಾರು ಸುವ್ವೀ ಮಾನ್ಯ ಮಾನ್ಯರು ಅಳಿದಾರು ಮತ್ತಿನ್ನು ಚನ್ನಬಸವಣ್ಣ ಬರುತಾನೆ ಸುವ್ವೀ ॥ ೪ ॥

ಕಡಿಯಾಟ ಬಂದೀತು ಕಡಿಯಾದೆ ಮುಂದಿನ್ನು ವಡಿಯನಂಬೆಯ್ಯ ಬರುತಾನೆ ಸುವ್ವಿ ವಡಿಯನೆಂಬೆಯ್ಯಾ ಬರುವಾಗ ಜಗವೆಲ್ಲ ಮಡಿದು ಹೋಗುವ ದಿನ ಬಂತು ಸುವ್ವಿ ॥ ೫ ॥

ಒಕ್ಕಲ ಮಗನ್ಯೆಯ್ಯಾ ಮಕ್ಕಳೊಂದಿಗ ಬಸವಾ ಚಿಕ್ಕತನದಲ್ಲಿ ಬರು ತಾನೆಸುವ್ವಿ ಚಿಕ್ಕತನದಲಿ ಬರುತಾನೆ ಅವರೀಗೆ ಪಕ್ಕಿಮರಕಟಗಳ ಬಿರಿದುಂಟು ಸುವ್ವಿ ॥ ೬ ॥

ಕಾಯವೆರಡೆಂಬೂದು ನ್ಯಾಯಾವು ಬ್ಯಾರುಂಟು ತಾಯಿ ನಂಬಿಕ್ಕ ಬರುತಾಳೀ ಸುವ್ವಿ ತಾಯಿ ನಂಬೆಟ್ಟ ಬರುತಾಳೆ ಲೋಕದಾ ನಾಯಿ ಮಾನ್ವರಿಗೆ ತಿಳಿಯಾದು ಸುವ್ವಿ ॥ ೭ ॥

• ನಂದನ ಸಂವತ್ಸರಕೆ ಚಂದಾದಿ ದಿನ ತುಂಬಿ ತಂದೆ ಚನ್ನಣ್ಣ ಬರು ತಾನೆ ಸುವ್ವಿ ತಂದೆ ಚನ್ನಣ್ಣ ಬರುತಾನೆ ಲೋಕಕ್ಕೆ ನಂದಿಯಾ ಧ್ವಜವು ಕಡಿಯಾಟ ಸುವ್ವಿ ॥ ೮ ॥

• ಮಳಿಗಳು ಹೋದಾವು ಬೆಳಿಗಳು ಒಣಗ್ಯಾವು ಬಳಗವುಳ್ಳವರು ಮಡಿದಾರು ಸುವ್ವಿ ಬಳಗ ವುಳ್ಳವರು ಮಡಿದಾರು ಮರ್ತ್ಯಕ್ಕೆ ಅಳಿಯ ಬಸವಣ್ಣ ಬರುತಾನೆ ಸುವ್ವಿ ॥ ೯ ॥

• ಹೂಡಾಕ ಎತ್ತಿಲ್ಲ ಮಾಡಾಕ ಬದುಕಿಲ್ಲ ಬೀದಿಸಾಲುಗಳು ಒಣ ಗ್ಯಾವು ಸುವ್ವಿ ಬೀದಿ ಸಾಲುಗಳು ಒಣಗ್ಯಾವು ಮರ್ತ್ಯಕೆ ರೂಢಿಗೀಶ್ವ ರನು ಬರುವಾಗ ಸುವ್ವಿ ॥ ೧೦ ॥

• ಅಹುದೆಂದು ನುಡಿಯಾರು ಅಲ್ಲಾ ಎಂಬುದಬಿಡರು ಔದೇವನೇರಿ ಬರುತಾನೆ ಸುವ್ವಿ ಔದೇವನೇರಿ ಬರುತಾನೆ ಚನಬಸವ ಕೌದಿಕೋರಿಗಳು ಅಪರೂಪ ಸುವ್ವಿ ॥ ೧೧ ॥

• ಕೆಂಡದ ಮಳೆಗರಿದು ಭೂಮಂಡಲ ಉರಿದೆದ್ದು ಹಿಂದೆ ಶರಣಾರು ಬರುತಾರೆ ಸುವ್ವಿ ಹಿಂದೆ ಶರಣರು ಬರುತಾರೆ ಚನ್ನಬಸವ ಅಂದು ಪಾವಾಡಾ ಮೆರೆದಾನು ಸುವ್ವಿ ॥ ೧೨ ॥

ಹಾಸಾಕ ಅರಿಬಿಲ್ಲ ಹೊಸಾಕ ಎಣ್ಣಿಲ್ಲ ಕೂಸಿಗೆ ಅನ್ನ ಮೊದಲಿಲ್ಲ
ಸುವ್ವೀ ಕೂಸಿಗೆ ಅನ್ನ ಮೊದಲಿಲ್ಲ ಮರ್ತ್ಯವು ಗಾಸಿಯಾಗುವದಿನ ಬಂತು
ಸುವ್ವೀ ॥ ೧೩ ॥

ಏಳುನಾಲಿಗಿ ದುರ್ಗಿ ಹಾಳು ಮಾಡುತಾಳೆ ಗುಳೇದ ಸುದ್ದಿ ಘನ
ವಾಗಿ ಸುವ್ವೀ ಗುಳೇದ ಸುದ್ದಿ ಘನವಾಗಿ ಕಲಿಯುಗವು ಹಾಳಾಗುವ
ದಿನ ಬಂತು ಸುವ್ವೀ ॥ ೧೪ ॥

ಡಿಳ್ಳಿ ಹಳ್ಳಿಗಳಾಗಿ ಆಳುವಾದಿನ ಬಂತು ಮಾಳಿಗಿ ಮನೆಯು ಅಳಿ
ದಾವು ಸುವ್ವೀ ಮಾಳಿಗಿ ಮನೆಯು ಅಳಿದಾವು ಮರ್ತ್ಯಕ್ಕೆ ಅಳಿಯ ಚನ್ನ
ಣ್ಣ ಬರುವಾಗ ಸುವ್ವೀ ॥ ೧೫ ॥

ಹೊಳಿಯು ಬಚ್ಚಲವಾಗಿ ಆಳಿಯ ಬರುವ ದಿನಕೆ ಕಳೆಯು ಮಾನ
ವರಿಗೆ ಮುನ್ನಿಲ್ಲ ಸುವ್ವೀ ಕಳೆಯು ಮಾನವರಿಗೆ ಮುನ್ನಿಲ್ಲಾ ರಾಜ್ಯಕ್ಕೆ
ದಾಳಿ ತರುತಾನೆ ಚನಬಸವಾ ಸುವ್ವೀ ॥ ೧೬ ॥

ಹೆಂತಿಯಾ ಕಟ್ಯಾರು ಸಂತಿಯಾ ಮಾಡ್ಯಾರು ಸಂತತಿ ನೆರಿಶ್ಯಾರು
ಪರಾಭವಕೆ ಸುವ್ವೀ ಸಂತತಿ ನೆರಿಶ್ಯಾರು ಪರಾಭವಕೆ ಮುಂದಿನ್ನು ಪಂಗ್ತಿಗ
ಟ್ಯಾರು ಸುರಿದಾರು ಸುವ್ವಿ ॥ ೧೭ ॥

ಬಾಳಾಬಲ್ಲೆನೆಂಬ ಕೋಳಿ ಮನುಜರ ಮೇಲೆ ದಾಳಿ ತರುತಾನೆ
ಧ್ವಜ ಹಿಡಿದು ಸುವ್ವೀ ದಾಳಿ ತರುತಾನೆ ಧ್ವಜ ಹಿಡಿದು ಮರ್ತ್ಯದ ಕೀಳು
ಮನುಜರ ಯಳಸೂತ ಸುವ್ವೀ ॥ ೧೮ ॥

ದೊಡ್ಡ ದೊಡ್ಡವರಿಗೆ ವಡ್ಯಾರು ರೊಕ್ಕವಾ ಗಡ್ಡ ಗಡ್ಡಕ್ಕೆ ಗಂಟೆಕ್ಕಿ
ಸುವ್ವೀ ಗಡ್ಡ ಗಡ್ಡಕ್ಕೆ ಗಂಟೆಕ್ಕಿ ಸುಲಿದಾರು ದಡ್ಡ ಮನುಜರಿಗೆ ಇದು
ತಿಳಿಯಾದು ಸುವ್ವೀ ॥ ೧೯ ॥

ಮಕ್ಕಳು ಮರಿಗಳಾ ಬಿಡುವುತ ನಡದಾರು ದುಃಖ ಇನ್ನೇನು
ಹೇಳಲಿ ಸುವ್ವೀ ದುಃಖ ಇನ್ನೇನು ಹೇಳಲಿ ದಿನಗಳು ಒತ್ತಿ ಬಂದಾವು
ತಡವಿಲ್ಲ ಸುವ್ವೀ ॥ ೨೦ ॥

• ವೀರಕ್ತರೆಂಬುವರು ಸೇರ್ಯಾರು ಮನೆ ಮನೆಯಾ ನಾರೇರ ಗೋಷ್ಠಿ
ವ್ಯಾಪಾರ ಸುವ್ವೀ ನಾರೇರ ಗೋಷ್ಠಿ ವ್ಯಾಪಾರ ಮಾಡುತ ಜಾರತನದಲ್ಲಿ
॥ ೨೧ ॥
ತಿರಿಗ್ಯಾರು ಸುವ್ವೀ

• ರಂಡೇರು ಆಳೇರು ಮಿಂಡರನ ಸಾಕ್ಯಾರು ದಂಢ ತೆತ್ತಾರು ಅರ
ಮನಿಗೆ ದಂಡ ತೆತ್ತಾರು ಅರಮನಿಗೆ ಲೋಕದೊಳು ಬಂದೆದ್ದು ಹೋ
॥ ೨೨ ॥
ದಾರು ಕಡೆಯಾಟಾ ಸುವ್ವೀ

• ಮನಿಗೆರಡು ಹೆಣಗಳು ಹೊಲಕೆರಡು ಕಣಗಳು ಹೊಣಿಕೆ ಇಂದೆದ್ದು
ಬರುತಾವೆ ಸುವ್ವೀ ಹೊಣಿಕೆ ಇಂದೆದ್ದು ಬುರುತಾವೆ ದಿನಗಳು ತ್ರಿಣಿ
॥ ೨೩ ॥
ಯಂಕ ಬಸವ ಬರುವಾಗ ಸುವ್ವೀ

• ತಾಯಿ ಎಂದರೆ ಬಿಡರು ನಾಯಿ ಎಂದರೆ ಬಿಡರು ಕಾಯುವು ಕೆಟ್ಟು
ಯಮಪುರಕೆ ಸುವ್ವೀ ಕಾಯುವು ಕೆಟ್ಟು ಯಮಪುರಕೆ ಹೋಗುವ ನಾಯಿ
॥ ೨೪ ॥
ಮಾನವರಿಗೆ ತಿಳಿಯದು ಸುವ್ವೀ

• ಸಂಗಯ್ಯಾ ಬರುವಾಗ ಲಿಂಗವಂತರೆಲ್ಲ ಬಂಗಿ ಮಾಂಸವ ತಿನು
ತಾರೆ ಸುವ್ವೀ ಬಂಗಿ ಮಾಂಸವ ತಿನುತಾರೆ ಜಗವೆಲ್ಲ ಯಂಗ್ಯಾಟವಾಗಿ
॥ ೨೫ ॥
ಆಳಿದಾರು ಸುವ್ವೀ

• ಹಾಳು ಆಯಿತು ಲೋಕ ಬಾಳ ಕರ್ಮಗಳಿಂದೆ ದಾಳಿ ತರುತಾನೆ
ಜಗಕೆಲ್ಲ ಸುವ್ವೀ ದಾಳಿ ತರುತಾನೆ ಜಗಕೆಲ್ಲ ಮುಂದಿನ್ನು ಕೂಳುನೀರು
॥ ೨೬ ॥
ಗಳು ಅಪರೂಪ ಸುವ್ವೀ

• ಬೀಜವು ಉಳಿದಾವು ರಾಜರು ಅಳಿದಾರು ಮಾಜಿ ಹೋಯಿತು ಜಗ
ವೆಲ್ಲ ಸುವ್ವೀ ಮಾಜಿ ಹೋಯಿತು ಜಗವೆಲ್ಲ ಚನ್ನಣ್ಣ ತೇಜಿಯನೇರಿ
॥ ೨೭ ॥
ಬರುತಾನೆ ಸುವ್ವೀ

• ಸತ್ಯಕ್ಕ ಹೇಳಿದಳೀ ಉತ್ತಮ ನುಡಿಗಳಾ ಮತ್ತೆ ಶರಣರು ಲಾಲಿ
ಪುದು ಸುವ್ವೀ ಮತ್ತೆ ಶರಣರು ಲಾಲಿಪುದು ಶಿವನುಡಿಯಾ ಮುಕ್ತಿಯು
॥ ೨೮ ॥
ಳ್ಳವರು ಬರಕೊಳ್ಳಿ ಸುವ್ವೀ

**ಶಿವಶರಣೆ ಸತ್ಯಕ್ಕ ಹೇಳಿದ ಕಾಲಜ್ಞಾನ ಸಂಪೂರ್ಣಮಸ್ತು**

REDMI NOTE 8 PRO
ಶ್ರೀಶೈಲ ತುಂಗಳದ
2021/10/6 13:3